ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 12 ಸಂ. 5 ಮೇ 2015 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು - ಅಕ್ಟೋಬರ್ 1998ರ ಸಂಚಿಕೆ)

"'ಬೆಳಕಿಗೆ ಬಾಗಿಲುಗಳು' ಪುಸ್ತಕದ ಓದುಗನಿಂದ ನಾನು ಏನನ್ನು ನಿರೀಕ್ಷಿಸುತ್ತೇನೆ," ಎಂದು ಒಬ್ಬ ವ್ಯಕ್ತಿ ನನ್ನನ್ನು ಕೇಳಿದರು. ಓದುಗನು ತನ್ನ ಅಧ್ಯಾತ್ಮದ ಅನ್ವೇಷಣೆಯನ್ನು ಆರಂಭಿಸಬೇಕು, ಉತ್ತರಗಳನ್ನು ಅರಸಬೇಕು, ಪ್ರತೀ ಉತ್ತರದೊಂದಿಗೆ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಕೇಳಬೇಕು, ಸೂಕ್ಷ್ಮಲೋಕ ಸೂಕ್ಷ್ಮಯಾನಗಳ ಬಗ್ಗೆ ತಿಳಿದುಕೊಳ್ಳಬೇಕು, ಋಷಿಗಳನ್ನು ಹಾಗೂ ಉನ್ನತ ಲೋಕಗಳ ಮಹಿಮಾನ್ವಿತರನ್ನು ಸಂಪರ್ಕಿಸುವ ಪ್ರಯತ್ನ ಮಾಡಬೇಕು. ಶಾಂತಿ, ಪ್ರೀತಿ ಮತ್ತು ಬೆಳಕನ್ನು ಪಸರಿಸಬೇಕು. ನನ್ನ ನಿರೀಕ್ಷೆ ಹೆಚ್ಚಾಯಿತೆ? ಇರಬಹುದು.

ಆ ಪುಸ್ತಕದಲ್ಲಿ ಹಲವಾರು ಬಾಗಿಲುಗಳಿವೆ.

ಒಬ್ಬ ವ್ಯಕ್ತಿ, "ನನಗೆ ಸಮಾಧಿ ಬೇಡ, ಮೋಕ್ಷ ಬೇಡ. ಸಂಕಷ್ಟದಲ್ಲಿರುವ ಜನರ ಚಿಂತೆ ನನಗೆ" ಎಂದು ಹೇಳಿದರು. ಅದೊಂದು ಉದಾತ್ತ ಹೇಳಿಕೆಯೇನೋ ಸರಿ. ಆ ವ್ಯಕ್ತಿ ಅದರ ಬಗ್ಗೆ ಏನು ಮಾಡಬೇಕೆಂದಿದ್ದಾನೆ? ನನಗೆ ತಿಳಿಯದಾಯಿತು.

ಆದರೆ ನಾನೇನು ಮಾಡಬಲ್ಲೆನೆಂದು ನನಗೆ ತಿಳಿದಿದೆ. ಎಲ್ಲರ ಕಣ್ಣೀರೊರೆಸಲು ನನ್ನಿಂದ ಸಾಧ್ಯವಿಲ್ಲ. ಎಲ್ಲ ಗಾಯಗಳನ್ನು ವಾಸಿಮಾಡಲು ನನ್ನಿಂದಾಗದು. ಆದರೆ ನನ್ನ ಬಳಿ ಬರುವವರೆಲ್ಲರಿಗೂ ನಾನು ಮುಗುಳ್ನಗಲು, ಕನಸು ಕಾಣಲು ಮತ್ತು ಆಶಾವಾದಿಗಳಾಗಲು ಕಲಿಸುತ್ತೇನೆ. ತಮ್ಮ ಆಂತರ್ಯದ ಶಕ್ತಿ ಮತ್ತು ವಿವೇಕದ ಕಣಜವನ್ನು ತಲುಪುವುದು ಹೇಗೆ ಹಾಗೂ ಜೀವನವನ್ನು ಎದುರಿಸುವುದು ಹೇಗೆ ಎಂಬುದನ್ನು ಹೇಳಿಕೊಡುತ್ತೇನೆ. ಧ್ಯಾನವನ್ನು ಮಾಡುವುದು ಹೇಗೆ ಹಾಗೂ ಶಾಂತಿಯನ್ನು ಅನುಭವಿಸುವುದು ಹೇಗೆ ಎಂಬುದನ್ನು ಹೇಳಿಕೊಡುತ್ತೇನೆ.

ನನ್ನನ್ನು ಸೇರಿಕೊಂಡ ಮೇಲೆ, ಹಲವಾರು ಜನ ಮತ್ತೆ ಮಂದಹಾಸ ಬೀರಿದ್ದಾರೆ. ಹಲವರು ಪರಿಪೂರ್ಣವಾಗಿ ಬದುಕುವುದನ್ನು ಕಲಿತಿದ್ದಾರೆ. ಹಲವರು ಸಮಾಧಿಯನ್ನೂ ಅನುಭವಿಸಿದ್ದಾರೆ. ಹಲವರು ಮೋಕ್ಷ ಹೊಂದುತ್ತಾರೆ ಎಂಬ ಭರವಸೆ ನನಗಿದೆ. ಅಧ್ಯಾತ್ಮದ ಜಾಗೃತಿಯೊಂದೇ ಎಲ್ಲ ಸಂಕಷ್ಟಗಳ ನಿಮಿತ್ತಗಳನ್ನು ನಿವಾರಿಸಲು ಸಾಧ್ಯ.

ನಾನು ನಡೆಸಬೇಕೆಂದಿರುವ ಯೋಗದ ಉನ್ನತ ಅಭ್ಯಾಸಗಳ ವಿಶೇಷ ಕೋರ್ಸಿಗೆ ಸೇರಲು ಹಲವಾರು ಧ್ಯಾನಿಗಳು ಆಸಕ್ತಿ ತೋರಿದ್ದಾರೆ. ಅವರ ಅರ್ಜಿಗಳನ್ನು ಓದುವುದೇ ನನಗೊಂದು ಸಾರ್ಥಕ ಅನುಭವವಾಗಿತ್ತು. ನನ್ನ ಸುತ್ತಲಿರುವ ಎಷ್ಟೊಂದು ಧ್ಯಾನಿಗಳು ಎಷ್ಟು ಮನಃಪೂರ್ವಕವಾಗಿ ಸಾಧನೆಯನ್ನು ಮಾಡುತ್ತಿದ್ದಾರೆ! ಎಷ್ಟೊಂದು ಜನ ಸಾಧನೆಯ ತಿರುಳನ್ನು ಅರ್ಥಮಾಡಿಕೊಂಡಿದ್ದಾರೆ ಹಾಗೂ ಎಷ್ಟೊಂದು ಜನರಿಗೆ ನನ್ನ ಮಾರ್ಗದರ್ಶನದಲ್ಲಿ ಮತ್ತು ಋಷಿಗಳಲ್ಲಿ ವಿಶ್ವಾಸವಿದೆ! ನನ್ನ ತೋಟದಲ್ಲಿ ನಳನಳಿಸುತ್ತಿರುವ ಇಷ್ಟೊಂದು ಹೂವುಗಳನ್ನು ನೋಡಿದರೆ ಹೃದಯ ತುಂಬಿಬರುತ್ತದೆ. ಅವುಗಳನ್ನು ಆರೈಕೆ ಮಾಡುವ ಎಂತಹ ದೊಡ್ಡ ಜವಾಬ್ದಾರಿ ನನ್ನ ಮೇಲಿದೆ. ಭಗವಂತಾ! ನನಗೆ ಶಕ್ತಿ ಕೊಡು...ಜೊತೆಗೆ ಆಯಸ್ಸನ್ನೂ.

ಒಬ್ಬರ ಚಕ್ರಕ್ಕೆ ಪೆಟ್ಟಾಗಿದೆ ಎಂದು ಯಾರೋ ಹೇಳುವುದನ್ನು ಕೇಳಿದೆ. ಚಕ್ರಗಳು ವಿಸ್ತರಿಸುತ್ತವೆ ಎಂದೂ ಜನರು ಹೇಳುವುದನ್ನು ಕೇಳಿದ್ದೇನೆ. ಅಂತಹ ಸಮಯದಲ್ಲೆಲ್ಲಾ, ನನಗೆ, ಇನ್ನೂ ಹೆಚ್ಚು ಅಧ್ಯಯನ ಮಾಡಿ ಚಕ್ರಗಳ ಬಗ್ಗೆ ಹೆಚ್ಚು ಅರಿತುಕೊಳ್ಳುವ ಮನಸ್ಸಾಗುತ್ತದೆ. ಅದಕ್ಕೆ ಬಹಳ ಸಮಯ ಬೇಕಾಗುತ್ತದೆ. ಚಕ್ರಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಪಡೆಯಲು, ಬಹಳ ಹೊತ್ತು ಧ್ಯಾನ ಮಾಡಿ ಅರಿವಿನ ಆಳವಾದ ಸ್ತರಗಳನ್ನು ತಲುಪಬೇಕಾಗುತ್ತದೆ, ನಂತರ ಅದನ್ನು ಯೋಚನೆಗಳಾಗಿ ಮತ್ತು ಶಬ್ದಗಳಾಗಿ ವ್ಯಾಖ್ಯಾನಿಸಬೇಕಾಗುತ್ತದೆ.

ಸದ್ಯಕ್ಕೆ, ನನಗೆ ತಿಳಿದಂತೆ, ಚಕ್ರಗಳು ವಿಸ್ತಾರವಾಗುವುದಿಲ್ಲ. ಅವು ನಿಷ್ಕ್ರಿಯವಾಗಬಹುದೇ ವಿನಾ ಹಾನಿಗೊಳಗಾಗುವುದಿಲ್ಲ.

ಏನೇ ಆಗಲಿ, ನಾನು ಇನ್ನೂ ಹೆಚ್ಚು ತಿಳಿದುಕೊಳ್ಳಬೇಕಾಗಿದೆ! ■

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಬೆಂಗಳೂರಿನ ಶಾಲೆಯೊಂದರ ಸಿಬ್ಬಂದಿವರ್ಗ ಬೆಳಕನ್ನು ಚಾನಲ್ ಮಾಡುತ್ತಿರುವುದು.

### ಸುದ್ದಿ-ಸೂಚನೆ

- 24-5-2015 ರಂದು ತಪೋನಗರದಲ್ಲಿ ಗುರೂಜಿಯವರ 76ನೇ ಹುಟ್ಟುಹಬ್ಬವನ್ನು ಆಚರಿಸಲಾಗುವುದು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 22-5-2015 ರೊಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬಹುದು.
- ಆನೇಕಲ್‌ನಲ್ಲಿರುವ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದ 7ನೇ ವಾರ್ಷಿಕೋತ್ಸವವನ್ನು 13-4-2015 ರಂದು ಆಚರಿಸಲಾಯಿತು.
- ನಮ್ಮ ಸಾಧಕರಿಗೆ ತಪೋನಗರದಲ್ಲಿ ಓರಿಯಂಟೇಶನ್ ತರಗತಿಯನ್ನು ದಿನಾಂಕ 06-05-2015, ಬುಧವಾರದಂದು ಬೆಳಿಗ್ಗೆ 11 ಕ್ಕೆ ಆಯೋಜಿಸಲಾಗಿದೆ. ವೆಬ್‌ಕಾಸ್ಟ್ ವ್ಯವಸ್ಥೆಯನ್ನು ಹೊಂದಿರುವ ದೂರಕಲಿಕೆಯ ಸಾಧಕರು ಕೂಡಾ ಇದರ ನೇರಪ್ರಸಾರದಲ್ಲಿ ಭಾಗವಹಿಸಬಹುದು. ಆಸಕ್ತರು ಮಾನಸ ಆಫೀಸನ್ನು ಸಂಪರ್ಕಿಸಿ, ದಿನಾಂಕ 30-04-2015ರ ಮೊದಲು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- 20-03-15 ರ ಸೂರ್ಯಗ್ರಹಣದ ಸಮಯದಲ್ಲಿ ಮತ್ತು 04-04-2015 ರ ಚಂದ್ರಗ್ರಹಣದ ಸಮಯದಲ್ಲಿ ಸುಮಾರು 50ಕ್ಕೂ ಹೆಚ್ಚು ಧ್ಯಾನಿಗಳು ತಪೋನಗರದ ಮೆಡಿಟೇಶನ್ ಹಾಲ್‌ನಲ್ಲಿ ಸೇರಿ, ಗ್ರಹಣದ ಸಮಯದಲ್ಲಿ ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡಿದರು.
- ನಮ್ಮ ಲೈಟ್ ಚಾನಲಿಂಗ್ ಕೆಲಸದ ವ್ಯಾಪ್ತಿಯು ಇನ್ನೂ ಹೆಚ್ಚುಹೆಚ್ಚು ಹರಡುತ್ತಿದೆ. ನಾವೀಗ 5000 ಕ್ಕೂ ಹೆಚ್ಚು ಶಾಲೆಗಳಲ್ಲಿ ಸುಮಾರು 27 ಲಕ್ಷ ಮಕ್ಕಳಿಗೆ ಲೈಟ್ ಚಾನಲಿಂಗ್ ಅನ್ನು ಕಲಿಸಿದ್ದೇವೆ

### ಆನೇಕಲ್ ಕಾರ್ಯಕ್ರಮ

18-5-2015 ರಂದು ಬೆಳಿಗ್ಗೆ 11 ಘಂಟೆಗೆ ಆನೇಕಲ್‌ನ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 10-05-15 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 17-05-15 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 24-05-15 | ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮ |
| 31-05-15 | ಅಖಂಡ ಧ್ಯಾನ (ಲೈಟ್ ಚಾನಲಿಂಗ್): ಮಧ್ಯಾಹ್ನ 11-1 |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಸೋಮ | ಬುದ್ಧ ಪೂರ್ಣಿಮಾ |
| 11 | ಸೋಮ | ಕೃಷ್ಣ ಅಷ್ಟಮಿ |
| 16 | ಶನಿ | ಮಾಸ ಶಿವರಾತ್ರಿ |
| 18 | ಸೋಮ | ಗುರೂಜಿಯವರ ಹುಟ್ಟುಹಬ್ಬ<br>ಅಮಾವಾಸ್ಯೆ |
| 21 | ಗುರು | ಭಗವಾನ್ ಕಲ್ಕಿ ಜನ್ಮದಿನ |
| 24 | ಭಾನು | ಗುರೂಜಿಯವರ ಹುಟ್ಟುಹಬ್ಬ ಆಚರಣೆ |
| 26 | ಮಂಗಳ | ಶುಕ್ಲ ಅಷ್ಟಮಿ |
| 28 | ಗುರು | ಶುಕ್ಲ ದಶಮಿ |

### ತಪೋನಗರದಲ್ಲಿ ಗುರೂಜಿಯವರ ಹುಟ್ಟುಹಬ್ಬ ಕಾರ್ಯಕ್ರಮ

**ಭಾನುವಾರ, 24-05-2015**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಲೈಟ್ ಚಾನಲಿಂಗ್ ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್

ತಿಯರ್‌ನ ಚಿಂತಾಮಣಿ ಶಾಲೆಯಲ್ಲಿ, ಮೈದಾನವೊಂದರಲ್ಲಿ ಶಾಲಾ ಅಸೆಂಬ್ಲಿಯನ್ನು ಆಯೋಜಿಸಿಸಲಾಗಿತ್ತು. ಪಕ್ಕದಲ್ಲಿಯೇ ದಟ್ಟ ಸಂಚಾರವಿರುವ ರಸ್ತೆಯೊಂದಿದೆ. ವಿದ್ಯುತ್ ಇಲ್ಲದ ಕಾರಣದಿಂದ ಮೈಕ್‌ನ ವ್ಯವಸ್ಥೆಯಿರಲಿಲ್ಲ. ಲೈಟ್ ಚಾನಲಿಂಗ್ ಸೆಷನ್ ಮುಂದುವರಿಯುತ್ತಿದ್ದ ಹಾಗೆ ಅದ್ಭುತ ಚೈತನ್ಯಗಳು ತಂದ ನಿಶ್ಯಬ್ದತೆಯು, ಸೆಷನ್‌ನ ಸೂಚನೆಗಳು ಎಲ್ಲರಿಗೂ ಕೇಳಿಸುವಂತೆ ಮಾಡಿತು ಹಾಗೂ ವಾಹನ ಸಂಚಾರದ ಶಬ್ದವು ಗಮನಕ್ಕೆ ಬರಲಿಲ್ಲ.

ಅಳಂದಿ ಮಾತೋಬಾದಲ್ಲಿರುವ ಮಾತೋಬಾ ವಿದ್ಯಾಲಯದಲ್ಲಿ, ಮಧ್ಯಾಹ್ನದ ಬಿಸಿಲಿನಲ್ಲಿ ಮಕ್ಕಳು ಆಟದ ಮೈದಾನದಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಾಗಿ ಕುಳಿತಿದ್ದರು. ಅಂದು ಬಿಸಿಲು ಪ್ರಖರವಾಗಿತ್ತು. ಅಂದಿನ ಸೆಷನ್‌ನಲ್ಲಿ ಮಕ್ಕಳೆಲ್ಲಾ ಕಣ್ಣುಗಳನ್ನು ಮುಚ್ಚಿ ತಂತ್ರದ ಅಭ್ಯಾಸಮಾಡಲು ಆರಂಭಿಸುತ್ತಿದ್ದಂತೆಯೇ ಹಿತವಾದ ತಂಗಾಳಿಯು ಬೀಸಿ ಸುತ್ತಲಿನ ವಾತಾವರಣವನ್ನು ತಂಪಾಗಿಸಿತು! ನಾವು ಶಾಲೆಯನ್ನು ಬಿಡುವವರೆಗೂ ತಂಗಾಳಿ ಬೀಸುತ್ತಲೇ ಇತ್ತು.

ಎಲ್ಲಾ ಕಾರ್ಯಕರ್ತರು ಸೆಷನ್ ನಡೆಯುತ್ತಿರುವಾಗ ಅತ್ಯಂತ ಶಾಂತತೆಯನ್ನು ಅನುಭವಿಸಿದರು. ಮಾಸ್ಟರ್‌ಗಳ ಕೃಪೆ ಮತ್ತು ಭಗವಂತನ ಇರುವಿಕೆಯು ಸ್ಪಷ್ಟವಾಗಿ ತಿಳಿಯುತ್ತಿತ್ತು. ಸುತ್ತಮುತ್ತಲ ಪ್ರದೇಶ ಮತ್ತು ವಾತಾವರಣವು ಸೆಷನ್‌ಗಳ ಮೊದಲು ಮತ್ತು ನಂತರ ಭಿನ್ನವಾಗಿತ್ತು. ನಾವು ಮನೆಗೆ ಹಿಂದಿರುಗಿ ಬರುವಾಗ ಮುಳುಗುತ್ತಿರುವ ಸೂರ್ಯನು, ಮುಂದಿನ ವರ್ಷಗಳ ಸೆಷನ್‌ಗಳಿಗಾಗಿ, ಸಾಧನೆಗಾಗಿ ಹಾಗೂ ಜೀವನದಲ್ಲಿ ಎಲ್ಲವುದಕ್ಕಾಗಿ ಸಂಪೂರ್ಣವಾದ ಭರವಸೆ ಮತ್ತು ನಿರೀಕ್ಷೆಯಂತೆ ಕಾಣುತ್ತಿದ್ದನು.

– ಶ್ರೀಮತಿ ಗೀತಾ ಜೋಶಿ, ಕಾರ್ಯಕರ್ತೆ

ನಾನು ಲೈಟ್ ಚಾನಲಿಂಗ್ ನಡೆಸಲು ಅನುಮತಿ ಪಡೆಯಲು ಒಂದು ಶಾಲೆಗೆ ಹೋದಾಗ, ಅತ್ಯಂತ ಸಂಶಯ ಮನೋಭಾವದವರಾದ ಅಲ್ಲಿನ ಪ್ರಾಂಶುಪಾಲರು ನಾನು ಲೈಟ್ ಬಗ್ಗೆ ವಿವರಿಸುತ್ತಿದ್ದುದನ್ನಾಗಲಿ ಅಥವಾ ನನಗೊಂದು ಅವಕಾಶಕೊಡಿ ಎಂಬ ನನ್ನ ಕೋರಿಕೆಯನ್ನಾಗಲೀ ಕೇಳಿಸಿಕೊಳ್ಳುತ್ತಿರಲಿಲ್ಲ. ನಾನು ಶಾಲೆಯ ಹೊರಗೆ ಕುಳಿತುಕೊಂಡು, ಬೆಳಕು ಮತ್ತು ಋಷಿಗಳಿಗೆ ನನಗೆ ಸಹಾಯ ಮಾಡುವಂತೆ ಕೇಳಿಕೊಂಡು ಲೈಟ್ ಚಾನಲ್ ಮಾಡಿದೆ. ಎರಡು ದಿನಗಳ ನಂತರ ಅದೇ ಶಾಲೆಯಿಂದ ಅವರ ಶಾಲಾ ಅಸೆಂಬ್ಲಿಯಲ್ಲಿ ಲೈಟ್ ಚಾನಲಿಂಗ್ ನಡೆಸಿಕೊಡುವಂತೆ ನನಗೊಂದು ದೂರವಾಣಿ ಕರೆ ಬಂತು! ಅಸೆಂಬ್ಲಿಯ ನಂತರ ಆ ಪ್ರಾಂಶುಪಾಲರು ಅವರ ಶಾಲೆಗೆ ಇಂತಹುದೇ ಅಭ್ಯಾಸದ ಅವಶ್ಯಕತೆಯಿದ್ದು, ಪ್ರತಿದಿನ ಇದರ ಅಭ್ಯಾಸವನ್ನು ಮಾಡುತ್ತೇವೆ ಎಂದು ಭರವಸೆ ನೀಡಿದರು. ಜೊತೆಗೆ 10ನೇ ಮತ್ತು 12ನೇ ತರಗತಿಯ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ವಿಶೇಷ ಸೆಷನ್ ಮಾಡಬೇಕೆಂದು ಕೇಳಿಕೊಂಡರು. ಮತ್ತೊಮ್ಮೆ ಬೆಳಕು ಪವಾಡವನ್ನು ಸೃಷ್ಟಿಸಿ ಜನರ ಹೃದಯದಲ್ಲಿ ಪರಿವರ್ತನೆಯನ್ನು ತಂದಿತು!

– ನಿತ್ಯಾ ಜೇಮ್ಸ್, ಕಾರ್ಯಕರ್ತೆ

## ತಪೋನಗರ ಡೈರಿ

ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್

ಮಾರ್ಚ್ ತಿಂಗಳ ನಿವಾಸಿಗಳ ಕೂಟದಲ್ಲಿ ನಕ್ಷತ್ರ ವೀಕ್ಷಣೆಯನ್ನು ಆಯೋಜಿಸಲಾಗಿತ್ತು. ತಮ್ಮೊಂದಿಗೆ ಫ್ಲಾಷ್ ಲೈಟ್‌ಗಳನ್ನು ತರಲು ಮತ್ತು ಯುಟಿಲಿಟಿ ಕಟ್ಟಡದ ಟೆರೇಸ್‌ನಲ್ಲಿ ಸೇರಲು ನಿವಾಸಿಗಳನ್ನು ಕೇಳಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ನಕ್ಷತ್ರಮಂಡಲಳದ ನಕ್ಷೆಗಳನ್ನು ಮತ್ತು ನಕ್ಷತ್ರಗಳ ಹಾಗೂ ನಕ್ಷತ್ರಗಳ ನಡುವಿನ ಆಕಾಶಕಾಯಗಳ ಬಗೆಗಿನ ಮಾಹಿತಿಯನ್ನೊಳಗೊಂಡ ಒಂದು ಕಿರುಹೊತ್ತಿಗೆಯನ್ನು ಹಂಚಲಾಯಿತು.

ಈ ಕಾರ್ಯಕ್ರಮಕ್ಕೆ ಸೂಕ್ತವಾದ ರಾತ್ರಿಯನ್ನು ಆರಿಸಿಕೊಳ್ಳುವಲ್ಲಿ ಅತ್ಯಂತ ಜಾಗರೂಕತೆಯನ್ನು ವಹಿಸಲಾಯಿತು. ಹಲವು ದಿನಗಳ ಮುಂಚಿತವಾಗಿ ಹವಾಮಾನ ಮುನ್ಸೂಚನೆಗಳನ್ನು ಗಮನಿಸಲಾಯಿತು; ರಾತ್ರಿ ಆಕಾಶವು ಹೆಚ್ಚು ಕತ್ತಲಿನಿಂದ ತುಂಬಿದ್ದು ನಕ್ಷತ್ರಗಳು ಗೋಚರಿಸುವುದಕ್ಕಾಗಿ ಅಮಾವಾಸ್ಯೆಯ ಮಾರನೆಯ ದಿನದ ರಾತ್ರಿಯನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಇಷ್ಟೆಲ್ಲಾ ಪ್ರಯತ್ನಗಳು ಮಾಡಿದರೂ ಕೂಡಾ ಕಾರ್ಯಕ್ರಮ ಆರಂಭಗೊಳ್ಳುತ್ತಿದ್ದಂತೆ, ಚದರಿರುವ ಮೋಡಗಳು ನಮ್ಮ ತಲೆಯ ಮೇಲ್ಭಾಗದಲ್ಲೇ ಸುಳಿದಾಡತೊಡಗಿದವು! ಕಣ್ಣುಕೋರೈಸುವ ಪಟ್ಟಣದ ಬೆಳಕು ಬಾನಂಚನ್ನು ಆವರಿಸಿತ್ತು. ಕಾರ್ಯಕ್ರಮದ ಸಮಯದಲ್ಲಿ ಬೆಳಕು ಆವರಿಸಿರುವುದನ್ನು ಕಡಿಮೆಮಾಡಲು ಕೆಲವರು ವಿದ್ಯುತ್ ಕಡಿತವುಂಟಾಗಲಿ ಎಂದು ಪ್ರಾರ್ಥಿಸಿದರು. ಆದರೆ ಅದು ಹಾಗಾಗಲಿಲ್ಲ. ಇದರಿಂದಾಗಿ ಕೇವಲ ದೊಡ್ಡ ನಕ್ಷತ್ರಗಳು ಮಾತ್ರ ಗೋಚರಿಸಿದವು. ಕೂಟದ ಮುಕ್ತಾಯದ ನಂತರವೇ ಆಕಾಶವು ತಿಳಿಯಾಯಿತು.

ಆದರೂ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಯಿತು. ಕಾರಣ, ನಿವಾಸಿಗಳು ಗುರೂಜಿಯವರಿಂದ ವಿನಯಪೂರ್ವಕ ಸ್ವೀಕೃತಿಯ ಕಲೆಯನ್ನು ಕಲಿತಿದ್ದರು. ಈಡೇರದ ಪ್ರಾರ್ಥನೆಗಳಿಗೆ ಮಾನವನ ಗ್ರಹಣಶಕ್ತಿಗೆ ಮೀರಿದ ಕಾರಣಗಳಿವೆ. ದೈವವು ತೆಗೆದುಕೊಳ್ಳುವ ನಿರ್ಧಾರ ಹಾಗೂ ಅದರ ವಿವೇಕದ ಮೇಲೆ ನಂಬಿಕೆಯಿಡುವ ಮತ್ತು ನಮಗೆ ಒದಗಿಸಿದ್ದನ್ನು ಸದುಪಯೋಗಪಡಿಸಿಕೊಳ್ಳುವ ಪಾಠಗಳನ್ನು ನಿವಾಸಿಗಳೆಲ್ಲರೂ ಚೆನ್ನಾಗಿ ಬಲ್ಲರು. ಗುರೂಜಿಯವರ ಬೋಧನೆಗಳು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದವು. ಗುರೂಜಿಯವರ ಬೋಧನೆಗಳಿಗೆ ಅನುಸಾರವಾಗಿ ಜೀವಿಸಲು ಮಾಡುವ ಪ್ರಾಮಾಣಿಕ ಪ್ರಯತ್ನಗಳೇ ನಿವಾಸಿಗಳು ಪ್ರತೀ ವರ್ಷವೂ ಗುರೂಜಿಯವರಿಗೆ ನೀಡುವ ಅಮೂಲ್ಯ ಉಡುಗೊರೆಯಾಗಿದೆ. ■

## ಲೈಟ್ ಚಾನಲ್ಸ್

ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ನವೆಂಬರ್ 2004

ಪ್ರತಿಯೊಂದು ಚಕ್ರವು, ನಾವು ಈ ಭೂಮಿಗೆ ಬರುವ ಹಾದಿಯಲ್ಲಿ ನಿರ್ದಿಷ್ಟ ಲೋಕವನ್ನು ಹಾದುಬಂದಾಗ ಪಡೆದುಕೊಂಡ ಒಂದು ಉಪಕರಣ. ಪ್ರತಿ ಚಕ್ರವೂ ಆ ಸ್ತರಕ್ಕೆ ಅಥವಾ ಲೋಕಕ್ಕೆ ದ್ವಾರವಾಗಿದೆ. ನಾವು ಚಕ್ರ ಹಂತಗಳಲ್ಲಿ ಹೆಚ್ಚು ಸಮಯ ಕಳೆಯದೆ ಶೀಘ್ರವಾಗಿ ಮುಂದಿನ ಹಂತಕ್ಕೆ ಹೋಗಬೇಕು, ಏಕೆಂದರೆ ನಾವು ಪ್ರಳಯದ ಪ್ರಕ್ರಿಯೆಯ ಕಾಲದಲ್ಲಿದ್ದೇವೆ. ನಾವು ಸಮಾಧಿಯ ಹಂತಕ್ಕೆ ಮುಂದುವರೆದಾಗ, ಬೇರೆ ಸ್ತರಗಳು ಮತ್ತು ಬೇರೆ ಲೋಕಗಳನ್ನು ಅನ್ವೇಷಿಸಲು ನಮಗೆ ಎಲ್ಲಾ ಅವಕಾಶಗಳಿರುತ್ತವೆ. ನಾವು ಧ್ಯಾನ ಮಾಡಿದಾಗ, ಸಹಜವಾಗಿಯೇ ಅನೇಕ ಪ್ರಯೋಜನಗಳಿವೆ. ನಾವು ಎಚ್ಚರಿಕೆಯಿಂದ ಗಮನಿಸಿದರೆ, ನಮ್ಮ ಸುತ್ತಲಿನ ಜನರು ಮತ್ತು ನಮ್ಮ ಮನೆಮಂದಿಯವರೆಲ್ಲರೂ ಕೂಡಾ ಪ್ರಯೋಜನ ಪಡೆಯುತ್ತಿರುವುದನ್ನು ನೋಡಬಹುದು. ನಮ್ಮ ಧ್ಯಾನ ಗಾಢವಾದರೆ ನಮ್ಮ ಪರಿಸರ ಮತ್ತು ಪ್ರದೇಶವೂ ಪ್ರಯೋಜನ ಪಡೆಯುತ್ತದೆ. ಧ್ಯಾನದ ಪ್ರಭಾವದ ವಲಯವನ್ನು ವಿಸ್ತರಿಸುತ್ತಾ ಹೋಗಬಹುದು. ಆದರೆ ಸಾಮಾನ್ಯವಾಗಿ ನಾವು ಇವುಗಳನ್ನು ಗಮನಿಸುವುದಿಲ್ಲ. ನಾವು ಧ್ಯಾನ ಮಾಡಿದರೆ ಮತ್ತು ಪ್ರಾಮಾಣಿಕವಾಗಿ ಬದಲಾಗಲು ಬಯಸಿದರೆ ಎಲ್ಲ ಅಡಚಣೆಗಳ ನಿರ್ಮೂಲನವಾಗುತ್ತದೆ; ಎಲ್ಲ ಸಮಸ್ಯೆಗಳು, ಎಲ್ಲ ಕಷ್ಟಗಳು ನಿಧಾನವಾಗಿ ಮಾಯವಾಗುತ್ತವೆ.

ಅನೇಕ ಲೋಕಗಳಿವೆ, ಕೆಲವು ನಮಗೆ ತಿಳಿದಿದ್ದರೆ ಹಲವು ನಮಗೆ ತಿಳಿದಿಲ್ಲ. ಅನೇಕ ಸತ್ಯಗಳಿವೆ, ಕೆಲವನ್ನು ನಾವು ಗ್ರಹಿಸುತ್ತೇವೆ, ಹಲವನ್ನು ಗ್ರಹಿಸುವುದು ನಮಗೆ ಸಾಧ್ಯವಿಲ್ಲ. ಈ ಭೂಮಿಯ ಮೇಲಿರುವಂತೆಯೇ ಅಪರಿಪೂರ್ಣತೆಯ, ಅಶುದ್ಧತೆಯ ಮತ್ತು ನೋವಿನಿಂದ ತುಂಬಿರುವ ಜೀವನವು ಕೆಲವು ಲೋಕಗಳಲ್ಲಿವೆ. ಕೆಲವು ಲೋಕಗಳಲ್ಲಿನ ಜೀವನವು ಪರಿಪೂರ್ಣ, ಪರಿಶುದ್ಧ ಹಾಗೂ ಆನಂದದಿಂದ ತುಂಬಿರುತ್ತವೆ. ನಮ್ಮ ಭೂಮಿಯಂತೆಯೇ ಕಾಲದ ಕಟ್ಟುಪಾಡಿಗೊಳಪಟ್ಟಿರುವ ಕೆಲವು ಲೋಕಗಳಿವೆ ಮತ್ತು ಕಾಲದ ಚಲನೆಯೇ ಇಲ್ಲವೇನೋ ಅನ್ನಬಹುದಾದಂಥ ಲೋಕಗಳೂ ಇವೆ. ನಾನು ಈ ವಿಷಯಗಳನ್ನು ಏಕೆ ಹೇಳುತ್ತಿರುವೆನೆಂದರೆ, ನಾವು ಧ್ಯಾನದಲ್ಲಿ ಮುಂದುವರೆದಾಗ ಹಾಗೂ ಸತ್ಯಯುಗದೊಳಕ್ಕೆ ಸಾಕಷ್ಟು ಪ್ರವೇಶಿಸಿದಾಗ, ಈ ಎಲ್ಲಾ ಲೋಕಗಳಿಗೂ ಪ್ರಯಾಣಿಸಿ ಅವುಗಳ ಬಗ್ಗೆ ತಿಳಿದುಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ಅದಕ್ಕಾಗಿ ನಾವು ನಮ್ಮ ಸಾಧನೆಯನ್ನು ತೀವ್ರಗೊಳಿಸಬೇಕು; ಈಗಿನ ಸಾಧನೆ ಸಾಕಾಗುವುದಿಲ್ಲ.

ಪ್ರತಿಯೊಂದು ಸನ್ನಿವೇಶಕ್ಕೂ ಮತ್ತೊಂದು ದೃಷ್ಟಿಕೋನವಿರುತ್ತದೆ. ಅದಕ್ಕೆ ಮೂರನೆಯ ದೃಷ್ಟಿಕೋನವೂ ಇರುತ್ತದೆ, ಅದು ದೇವರದು. ನಾವು ಮಾನವಮಟ್ಟದಿಂದ ಮೇಲೇರಿ ಆ ದೃಷ್ಟಿಕೋನದಿಂದ ಜೀವನವನ್ನು ನೋಡುವ ಪ್ರಯತ್ನ ಮಾಡಬೇಕು. ಆಗ ಅನೇಕ ವಿಷಯಗಳು ಅವಿವೇಕದ್ದಾಗಿರುವಂತೆ ಕಾಣುತ್ತದೆ. ಆಗ, ಸಂಪೂರ್ಣವಾಗಿ ಅಮುಖ್ಯವಾದ ವಿಷಯಗಳ ಬಗ್ಗೆ ಚಿಂತೆ ಮಾಡುತ್ತಾ ನಮ್ಮ ಜೀವನದ ಅಮೂಲ್ಯ ಭಾಗವನ್ನು ನಾವು ಹಾಳುಮಾಡಿಕೊಂಡಿರುವುದರ ಅರಿವುಂಟಾಗುತ್ತದೆ. ಅದಕ್ಕಾಗಿ ನಾವಿರುವ ಮಟ್ಟದಿಂದ ಮೇಲೇರಬೇಕಾಗುತ್ತದೆ. ಅದು ಎಂದಿಗೂ ಸಾಧ್ಯ. ಇದನ್ನು ಬೌದ್ಧಿಕವಾಗಿ ಮಾಡಬಹುದು. ಚಿಂತನೆ ಮಾಡಬೇಕು, ಪ್ರತಿದಿನವಲ್ಲದಿದ್ದರೂ ಆಗಿಂದಾಗ್ಗೆ ಒಂದು ಏಕಾಂತ ಸ್ಥಳಕ್ಕೆ ಹೋಗಿ ಒಂಟಿಯಾಗಿ ಮೌನದಲ್ಲಿ ಕುಳಿತುಕೊಳ್ಳಬೇಕು, ನಮ್ಮ ಜೀವನದ ಬಗ್ಗೆ, ನಮ್ಮ ಆದ್ಯತೆಗಳ ಬಗ್ಗೆ ಯೋಚಿಸಬೇಕು. ಜೀವನದಲ್ಲಿ ಎಲ್ಲವೂ ಮುಖ್ಯವಲ್ಲದಿರುವುದರಿಂದ, ಯಾವುದನ್ನು ಕೈಬಿಡಬೇಕೆಂಬುದನ್ನು ಆಗ ನಾವು ಗುರುತಿಸಿಕೊಳ್ಳುತ್ತೇವೆ. ಮೌಲ್ಯವುಳ್ಳವುಗಳನ್ನು ಮಾತ್ರ ಬೆಂಬತ್ತಬೇಕು. ನಾವು ಪ್ರಗತಿಹೊಂದಬೇಕಾದುದು ಹೀಗೆ. ಇದನ್ನು ನಾವುಗಳೇ ಮಾಡಬೇಕು. ವಿಷಯಗಳನ್ನು ಸ್ಪಷ್ಟವಾಗಿ ನೋಡಲು ಧ್ಯಾನ ಸಹಾಯಮಾಡುತ್ತದೆ.

ಬೇರೆಬೇರೆ ಉದ್ದೇಶಗಳಿಂದ ಜನರು ಧ್ಯಾನವನ್ನು ಅಥವಾ ಯಾವುದೇ ವಿಧದ ಸಾಧನೆಯನ್ನು ಪ್ರಾರಂಭಿಸುತ್ತಾರೆ. ಪ್ರಾರಂಭಿಸುವುದು ಮುಖ್ಯ. ಪ್ರಾರಂಭಿಸಿದ ನಂತರ ಸಾಕಷ್ಟು ಪ್ರಯಾಣಿಸುತ್ತೇವೆ. ನಂತರ ಗುರಿಗಳು ಬದಲಾಗುತ್ತವೆ. ಪರಿಪೂರ್ಣತೆ ನಮ್ಮ ಗುರಿಯಾದರೆ ನಾವು ದೇವರನ್ನು ತಲುಪುತ್ತೇವೆ. ನಮ್ಮ ಸಾಧನೆಯ ಗುರಿ ಪರಿಪೂರ್ಣತೆಯಾಗಬೇಕು. ಪರಿಪೂರ್ಣತೆಯನ್ನು ಸಾಧಿಸಿದಾಗ ನಮ್ಮ ಭಾವನೆಗಳು ಸರಿಯಿರುತ್ತವೆ, ಆಲೋಚನೆಗಳು ಸರಿಯಿರುತ್ತವೆ ಹಾಗೂ ನಮ್ಮ ಜೀವನ ಸಮರ್ಪಕವಾಗಿರುತ್ತದೆ. ಇಡೀ ಜೀವನ ಪರಿಪೂರ್ಣತೆಯಿಂದ ಕೂಡಿರುತ್ತದೆ. ಪರಿಪೂರ್ಣತೆ ದೈವಿಕವಾದುದು ಹಾಗೂ ದೇವರು ಪರಿಪೂರ್ಣ.

ಚಿಂತನೆಗೆ ವಿಷಯಗಳು:

ನಾನು ಒಂದು ಪತ್ರಿಕೆಯಲ್ಲಿ ಓದಿದೆ : ಅತ್ಯಂತ ಮೌನದ ಕ್ಷಣಗಳೇ ಅತ್ಯಂತ ಸಂತೋಷದಾಯಕ ಕ್ಷಣಗಳು. ನಾವು ಮೌನವಾಗಿದ್ದಾಗ ದೇವರನ್ನು ಆಲಿಸುವುದು ಮಾತ್ರವಲ್ಲದೆ, ಅವನನ್ನು ಅನುಭವಿಸುತ್ತೇವೆ ಕೂಡ.

ಖಲೀಲ್ ಗಿಬ್ರಾನ್ ಹೀಗೆ ಹೇಳಿದರು – ನಾವು ಪರ್ವತದ ತುದಿಯನ್ನು ತಲುಪಿದಾಗ ಹತ್ತುವುದು ಪ್ರಾರಂಭವಾಗುತ್ತದೆ. ನಾವು ತುಟ್ಟತುದಿಯನ್ನು ತಲುಪಿದ ಮೇಲೆ ಹತ್ತುವುದಕ್ಕೆ ಬೇರೇನಿದೆ? ಇದನ್ನು ನಾನು ಅರ್ಥಮಾಡಿಕೊಂಡಿದ್ದು ಹೀಗೆ – ಒಂದು ಮಟ್ಟದ ಪ್ರಯಾಣವನ್ನು ನಾವು ಮುಗಿಸಿದ್ದೇವೆ, ಮತ್ತೊಂದು ಮಟ್ಟದ ಪ್ರಯಾಣವನ್ನು ನಾವು ಆರಂಭಿಸಬೇಕು.

ಕೈವಲ್ಯವೆಂದರೆ ದೇವರೊಂದಿಗಿನ ಏಕತೆ. ಅದು ನಮ್ಮ ಅಸ್ತಿತ್ವದ ಸ್ಥಿತಿ. ಇದು ಆಗುವುದು ನಾವು ದೇವರಲ್ಲಿಗೆ ಹಿಂದಿರುಗಿದಾಗ. ಕೈವಲ್ಯವನ್ನು ನಾವು ಇಲ್ಲಿರುವಾಗಲೂ ಅನುಭವಿಸಬಹುದು, ಆದರೆ ಧ್ಯಾನದ ಸಮಯದಲ್ಲಿ ಮಾತ್ರ. ಉನ್ನತ ಸಮಾಧಿಯಲ್ಲಿ ಏಕತೆ ಅಂದರೆ ಕೈವಲ್ಯದ ಅನುಭವವಾಗುತ್ತದೆ.

'ನಾವು ಧ್ಯಾನಮಾಡಿದಾಗ ಬೇರೆ ಏನನ್ನೂ ಮಾಡಬೇಕಾಗಿಲ್ಲ, ಏಕೆಂದರೆ ಧ್ಯಾನದಲ್ಲಿ ನಾವು ದೇವರ ಅತೀ ಸನಿಹಕ್ಕೆ ಹೋಗುತ್ತೇವೆ', ಎಂದು ಅಮರರವರು ಹೇಳಿದರು. ಆದರೆ ಜನರಿಗೆ ಕೆಲವು ಅಭ್ಯಾಸಗಳು, ಕೆಲವು ಆಚರಣೆಗಳು ಅಭ್ಯಾಸವಾಗಿ ಬಿಟ್ಟಿದೆ, ಅವುಗಳನ್ನು ಕೂಡಲೇ ಬಿಡಲು ಅವರಿಂದಾಗುವುದಿಲ್ಲ. ಆದ್ದರಿಂದ ನಿಮಗೆ ಬೇಕಿದ್ದರೆ ಯಾವುದೇ ರೀತಿಯ ಪೂಜೆಯನ್ನು ನೀವು ಮುಂದುವರೆಸಬಹುದು. ಅದು ನಿಷಿದ್ಧವಲ್ಲ, ಅದು ತಪ್ಪಲ್ಲ. ಆದರೆ, ಧ್ಯಾನವು ಪೂಜೆಯ ಅತ್ಯುನ್ನತ ವಿಧಾನವೆಂಬುದು ವಾಸ್ತವ ಸಂಗತಿ.

ಯಾವುದು ದೈವಿಕವೋ ಅದೇ ದೈವತ್ವ! ನನಗೆ ಪ್ರೀತಿಯೇ ದೈವತ್ವ, ಪ್ರೀತಿಗೆ ಎಲ್ಲವೂ ಸಾಧ್ಯ. ಈ ಸೃಷ್ಟಿಯು ಪ್ರೀತಿಯಿಂದಲೇ ಹುಟ್ಟಿದ್ದು. ಬೇರೆ ಹಲವಾರು ವಿಷಯಗಳನ್ನು ಸೇರಿಸಬಹುದು. ಆದರೆ ಪ್ರೀತಿ ಅತಿ ಮುಖ್ಯ ಭಾಗ.

ದೀಕ್ಷೆ ಆಗಿಂದಾಗ್ಗೆ ಆಗುತ್ತದೆ. ಮುಂದಿನ ಹಂತಕ್ಕೆ ಹೋದಾಗಲೆಲ್ಲಾ ನಮಗೆ ದೀಕ್ಷೆ ಬೇಕು. ಅದು ಗಡಿಯಾರಕ್ಕೆ ಕೀ ಕೊಟ್ಟಂತೆ. ಪ್ರತಿಯೊಂದು ಹಂತದಲ್ಲೂ ನಾವು ವಿಸ್ತಾರಗೊಳ್ಳಬೇಕು, ಬಲಗೊಳ್ಳಬೇಕು, ಸರಿಯಾದ ಮಾರ್ಗದಲ್ಲಿ ಹೋಗಬೇಕು, ಇದಕ್ಕೆಲ್ಲ ದೀಕ್ಷೆಯ ಅವಶ್ಯಕತೆಯಿದೆ.

ಪ್ರಾರಂಭದಲ್ಲಿ ಸಾಧನೆಯನ್ನು ಪ್ರಾರಂಭಿಸಲು ನಾವು ಸಿದ್ಧತೆ ಮಾಡಿಕೊಳ್ಳುತ್ತೇವೆ. ಸಿದ್ಧತೆಯೆಂದರೆ ಜ್ಞಾನವನ್ನು ಪಡೆದುಕೊಳ್ಳುವುದು, ಒಂದು ತಂತ್ರವನ್ನು ಪ್ರಾರಂಭಿಸುವುದು; ನಂತರ ಶುದ್ಧಗೊಳ್ಳುವುದು. ಸಾಧನೆಯೆಂದರೆ ಪರಿಪೂರ್ಣತೆಯೆಡೆಗಿನ ಪ್ರಯಾಣ. ನಾವು ಶುದ್ಧಗೊಳ್ಳದೆ ಪರಿಪೂರ್ಣತೆ ಸಾಧ್ಯವಿಲ್ಲ. ಆದ್ದರಿಂದ ಸಾಧನೆಯಲ್ಲಿ ಶುದ್ಧತೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಅತಿ ಶೀಘ್ರದಲ್ಲಿ ನಾವು ಶುದ್ಧರಾಗುತ್ತೇವೆಂದಲ್ಲ. ಆದರೆ ಅದರ ಪ್ರಕ್ರಿಯೆ ಆರಂಭವಾಗುತ್ತದೆ. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

28–07–2013

"ಧ್ಯಾನದ ಮುಂದಿನ ಹಂತಕ್ಕೆ ಅನುಮತಿ ಪಡೆಯಲು ಇರುವ ಮಾನದಂಡವೇನು" ಎಂದು ಧ್ಯಾನಿಯೊಬ್ಬರು ತಮ್ಮನ್ನು ಚೆಕ್ ಅಪ್ ಮಾಡುತ್ತಿದ್ದ ಶಿಕ್ಷಕರನ್ನು ಕೇಳಿದರು. ನಾವು ಬೆಳಕನ್ನು ಅನುಭವಿಸುತ್ತಿದ್ದೇವೆಯೇ ಹಾಗೂ ನಮ್ಮ ಜೀವನದಲ್ಲಿ ಬೆಳಕನ್ನು ಅಭಿವ್ಯಕ್ತಿಸುತ್ತಿದ್ದೇವೆಯೇ ಎನ್ನುವುದು ಇದಕ್ಕೆ ಮಾನದಂಡ. ಆತ್ಮಾವಲೋಕನ ಮಾಡಿಕೊಳ್ಳುವುದರ ಮೂಲಕ ನಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ನಾವೇ ತಿಳಿದುಕೊಳ್ಳಬಹುದು ಎಂದು ಗುರೂಜಿಯವರು ನಮಗೆ ಹೇಳಿದ್ದರು. ಮುಂದಿನ ಹಂತಕ್ಕೆ ಹೋಗಬೇಕಾದರೆ ಧ್ಯಾನಿಗಿರುವ ಅರ್ಹತೆಯನ್ನು ಋಷಿಗಳು ನಿರ್ಧರಿಸಿ ಅದನ್ನು ಶಿಕ್ಷಕರ ಅಂತರ್ಬೋಧೆಯ ಮೂಲಕ ತಿಳಿಯಪಡಿಸುತ್ತಾರೆ, ಆ ನಿರ್ಧಾರವನ್ನು ಧ್ಯಾನಿಗೆ ತಿಳಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಶಿಕ್ಷಕ ಒಂದು ಉಪಕರಣವಿದ್ದಂತೆ ಮಾತ್ರ. ಇದನ್ನು ವಿವರಿಸಲಾಯಿತಾದರೂ ಆ ವ್ಯಕ್ತಿಗೆ ಅದು ಮನವರಿಕೆಯಾಗಲಿಲ್ಲ, ಅವರು ವಾದಕ್ಕಿಳಿದರು. ಪವಿತ್ರವಾದ ಮತ್ತು ಆಧ್ಯಾತ್ಮಿಕವಾಗಿ ಉನ್ನತಗೊಂಡಿರುವ ವಾತಾವರಣದಲ್ಲಿ ಚೆಕ್ ಅಪ್ ನಡೆಯುತ್ತಿರುವಾಗ, ಇದು ಶಾಂತಿಗೆಡಿಸುವಂಥದ್ದಾಗಿದ್ದು ದುಃಖಕರವಾದ ವಿಚಾರವಾಗಿತ್ತು. ಆ ವ್ಯಕ್ತಿಯು ಮುಂದಿನ ಹಂತಕ್ಕೆ ಹೋಗಲು ಸಿದ್ಧಗೊಂಡಿಲ್ಲವೆನ್ನುವುದನ್ನು ಆತ ವಾದಮಾಡುತ್ತಿದ್ದ ಸಂಗತಿಯೇ ಸೂಚಿಸುತ್ತದೆ. ಬೆಳಕನ್ನು ಅನುಭವಿಸಿದ ವ್ಯಕ್ತಿ ವಾದಮಾಡುತ್ತಾನೆಯೇ? ನೀವು ಶಿಕ್ಷಕರನ್ನಾಗಲೀ, ನನ್ನನ್ನಾಗಲೀ ನಂಬಬೇಕಾಗಿಲ್ಲ. ನಾವು ವಿದ್ಯಾರ್ಥಿಗಳು, ಮಾಸ್ಟರ್‌ಗಳಲ್ಲ. ಆದರೆ ವ್ಯವಸ್ಥೆಯನ್ನು ನೀವು ನಂಬಬೇಕು.

ಈ ವ್ಯವಸ್ಥೆಯನ್ನು ಸ್ಥಾಪಿಸಿರುವುದು ಋಷಿಗಳು ಮತ್ತು ಗುರೂಜಿ. ನೀವು ಈ ವ್ಯವಸ್ಥೆಯನ್ನು ನಂಬದಿದ್ದರೆ, ಋಷಿಗಳನ್ನು ನಂಬದಿದ್ದರೆ, ಈ ಮಾರ್ಗದಲ್ಲಿ ಮುಂದುವರೆಯಲು ಕಾರಣವೇನು ಎಂದು ನಾನು ಆಶ್ಚರ್ಯಪಡುತ್ತೇನೆ. ಋಷಿಗಳು ಶಿಕ್ಷಕರನ್ನು ಆಯ್ಕೆ ಮಾಡಿದ್ದಾರೆ. ಚೆಕ್ ಅಪ್‌ನ ಪ್ರಕ್ರಿಯೆಯಲ್ಲಿ ತೊಡಗಿರುವ ಶಿಕ್ಷಕರಿಗೆ ಋಷಿಗಳು ಮಾರ್ಗದರ್ಶನ ನೀಡುತ್ತಾರೆ. ಋಷಿಗಳು ದೇವರಿದ್ದ ಹಾಗೆ. ಯಾವ ರೀತಿಯಿಂದಲಾದರೂ ಅವರು ನಮ್ಮನ್ನು ಮಾರ್ಗದರ್ಶಿಸುತ್ತಾರೆ.

ಅನೇಕ ಮಾರ್ಗಗಳಲ್ಲಿ, ಜನರು ಅವರ ಜೀವನಪರ್ಯಂತ ಒಂದೇ ತಂತ್ರವನ್ನು ಅಭ್ಯಾಸ ಮಾಡುತ್ತಾರೆ. ಅವರಲ್ಲಿ ಹಂತಗಳಿಲ್ಲ. ಇಲ್ಲಿ ಹಂತಗಳು ಮತ್ತು ತಂತ್ರಗಳನ್ನು ಸ್ಪಷ್ಟವಾಗಿ ನಿರ್ಧರಿಸಲಾಗಿದೆ. ಬೆಳಕನ್ನು ಅನುಭವಿಸುವ ಹಂತದ ತಂತ್ರಗಳು ಸರಳವಾಗಿರುವಂತೆ ಕಂಡರೂ ತುಂಬ ಶಕ್ತಿಶಾಲಿಯಾಗಿವೆ ಎನ್ನುವುದನ್ನು ಈ ಹಂತದ ಧ್ಯಾನಿಗಳು ತಿಳಿದುಕೊಳ್ಳಬೇಕು. ಈ ಹಂತಗಳು ಬೆಳಕನ್ನು ಅನುಭವಿಸಲು ಸಹಕಾರಿಯಾಗಿವೆ. ಒಂದೇ ಹಂತದಲ್ಲಿಯೇ ಬಹಳ ಸಮಯ, ಕೆಲವೊಮ್ಮೆ ಜೀವನ ಪೂರ್ತಿ ಧ್ಯಾನಮಾಡಬೇಕಾಗಬಹುದು. ನಮಗೆ ಬೆಳಕನ್ನು ಅನುಭವಿಸಲು ಸಾಧ್ಯ. ಬಹಳ ವರ್ಷಗಳ ಹಿಂದೆ, ಗುರೂಜಿಯವರು ಒಂದೇ ತಂತ್ರವನ್ನು 20 ವರ್ಷ ಅಭ್ಯಾಸ ಮಾಡಿದ್ದುದಾಗಿ ಅವರೇ ಒಮ್ಮೆ ಹೇಳಿದ್ದು ನನಗೆ ನೆನಪಿದೆ. ಅದೇಕೋ, ನಾವು ಹಂತಗಳನ್ನು ನಿರ್ಧರಿಸಿರುವುದರಿಂದ, ಮುಂದಿನ ಹಂತಗಳಿಗೆ ಹೋಗುವುದನ್ನು ಜನರು ನಿರೀಕ್ಷಿಸುತ್ತಾರೆ. ಹಾಗೆ ಆಗದಿದ್ದಾಗ ವಾದಕ್ಕೆ ಇಳಿಯುತ್ತಾರೆ. ಆದರೆ, ನಿಮ್ಮಲ್ಲಿ ಬಹುತೇಕ ಜನರಿಗೆ ಚೆಕ್ ಅಪ್‌ನ ಪ್ರಕ್ರಿಯೆ ಅರ್ಥವಾಗಿದೆಯೆಂದು ನನಗೆ ಗೊತ್ತಿದೆ.

25–08–2013

ಶಾಲಾ ಮಕ್ಕಳಿಗೆ ಬೆಳಕನ್ನು ಚಾನಲ್ ಮಾಡುವುದನ್ನು ಕಲಿಸುವ ಮೂಲಕ 'ಬೆಳಕಿನಿಂದ ಕ್ರಾಂತಿ' ಸಂಚಲನವನ್ನು ಹರಡುತ್ತಿದ್ದೇವೆ ಮತ್ತು ಬಲಗೊಳಿಸುತ್ತಿದ್ದೇವೆ. ನಮ್ಮ ಕಾರ್ಯಕರ್ತರ ನಮ್ರತೆಯ ಮತ್ತು ಪ್ರಾಮಾಣಿಕತೆಯ ವಿಧಾನವು ಶಾಲಾ ಆಡಳಿತ ವರ್ಗದವರ ಮನಮುಟ್ಟಿದೆ ಮತ್ತು ಅವರ ನಿಸ್ವಾರ್ಥ ಕೆಲಸಕ್ಕೆ ಪ್ರತಿಯಾಗಿ ಗೌರವಾದರಗಳನ್ನು ತೋರಿಸುತ್ತಾರೆ. ಇಲ್ಲಿನ ಕೆಲಸದಲ್ಲಿ ಭಾಗವಹಿಸುವ ಇಚ್ಛೆ ನಿಮಗಿದ್ದರೆ, ಬಹು ಮುಖ್ಯವಾದ ಲೈಟ್ ಚಾನಲಿಂಗ್ ಕೆಲಸವನ್ನು ನೀವು ತೆಗೆದುಕೊಳ್ಳಬಹುದು.

ಈ ಕೆಲಸದಲ್ಲಿ ನಮಗೆ ಸಹಾಯ ಮಾಡಲು ಋಷಿಗಳು ಇನ್ನೊಂದು ಮಟ್ಟದಿಂದ ಕೆಲಸಮಾಡುತ್ತಿರುವುದು ಸತ್ಯ ಸಂಗತಿಯಾದರೂ, ಕಾರ್ಯಕರ್ತನು ಅಪಾರವಾದ ಪ್ರೀತಿ, ಪ್ರಾಮಾಣಿಕತೆ ಮತ್ತು ವಿನಯದಿಂದ ಈ ಕೆಲಸವನ್ನು ಮಾಡಲು ಆರಿಸಿಕೊಂಡಿರುವುದರಿಂದ, ಈ ಮಟ್ಟದಲ್ಲಿನ ಅವನ ಕೆಲಸವೂ ತುಂಬ ಮುಖ್ಯ. ಪುಣೆಯ ನಮ್ಮ ಕಾರ್ಯಕರ್ತರೊಬ್ಬರು, ತಾವು ಗಮನಿಸಿದ ಒಂದು ಸೊಗಸಾದ ವಿಷಯವನ್ನು ನಮ್ಮೊಂದಿಗೆ ಹಂಚಿಕೊಂಡರು. ಶಾಲಾ ಆಡಳಿತ ವರ್ಗ ಅಥವ ಶಾಲಾ ಪ್ರಾಧ್ಯಾಪಕರು ಲೈಟ್ ಚಾನಲಿಂಗ್‌ನಲ್ಲಿ ಪ್ರಾಮಾಣಿಕವಾದ ಆಸಕ್ತಿ ಹೊಂದಿದ್ದರೆ, ಶಾಲೆಯ ಎಲ್ಲ ಮಕ್ಕಳು ಕೂಡ, ಚಾನಲಿಂಗ್ ಕೆಲಸದಲ್ಲಿ ಮನಃಪೂರ್ವಕವಾಗಿ ಭಾಗವಹಿಸುತ್ತಾರೆಂದು ಅವರು ಹೇಳಿದರು. ಆದ್ದರಿಂದ, ಪ್ರಾಧ್ಯಾಪಕರು ಬಹಳ ಮುಖ್ಯ ವ್ಯಕ್ತಿಯಾಗುತ್ತಾರೆ. ಅವರು ಮಕ್ಕಳ ಮೇಲೆ ಭಾರಿ ಪ್ರಭಾವ ಬೀರಬಲ್ಲರು. ಅದೇ ರೀತಿ, ಮುಖಂಡರುಗಳು ನಿಜವಾಗಿಯೂ ಇಚ್ಛಿಸಿದರೆ, ದೊಡ್ಡ ಬದಲಾವಣೆಗಳನ್ನು ತರಬಲ್ಲರು.

ವ್ಯಕ್ತಿಯೊಬ್ಬರು ತುಂಬ ಮುಖ್ಯವಾಗುತ್ತಾರೆ. ನಮ್ಮ ಜೀವನಗಳಲ್ಲಿ ಹಾಗೂ ಪ್ರಪಂಚದಲ್ಲಿ ದೊಡ್ಡ ಬದಲಾವಣೆ ತಂದ ಮಹರ್ಷಿ ಅಮರರವರು ಅಂಥ ಒಬ್ಬ ವ್ಯಕ್ತಿ. ಪ್ರಪಂಚಕ್ಕೆ ಈಗ ಅದು ತಿಳಿದಿಲ್ಲದಿರಬಹುದು, ಆದರೆ ಮುಂದಿನ ಪೀಳಿಗೆಯು ಅವರ ಕೊಡುಗೆಯ ಮಹತ್ವವನ್ನು ಕಂಡುಕೊಳ್ಳುತ್ತಾರೆಂದು ಗುರೂಜಿಯವರು ಹೇಳಿದ್ದರು. ನಮ್ಮಲ್ಲಿ ಪ್ರತಿಯೊಬ್ಬರೂ ಮುಖ್ಯ ವ್ಯಕ್ತಿಗಳು, ಪ್ರೀತಿಯನ್ನು ಅಭಿವ್ಯಕ್ತಿಸುವ ಮೂಲಕ ನಾವೆಲ್ಲರೂ ನಮ್ಮ ಪ್ರಪಂಚದ ಮೇಲೆ ಸಕಾರಾತ್ಮಕ ಪರಿಣಾಮವನ್ನುಂಟುಮಾಡಬಹುದು. ಅಮರ ಮಹರ್ಷಿಗಳು ಮತ್ತು ಗುರೂಜಿಯವರು ನಮ್ಮ ಜೀವನದ ಮೇಲೆ ಅಂಥ ದೊಡ್ಡ ಪ್ರಭಾವವನ್ನು ಬೀರಿದ್ದಾರೆ.

ಗುರೂಜಿಯವರು ಮಹರ್ಷಿ ಅಮರರವರ ಕೆಲಸವನ್ನು ಮುಂದುವರಿಸಿದರು, ಧ್ಯಾನವನ್ನು ಕಲಿಸುವುದಕ್ಕಾಗಿ ಈ ಮಾರ್ಗವನ್ನು 25 ವರ್ಷಗಳ ಹಿಂದೆ ಸ್ಥಾಪಿಸಿದರು. ಈ 25 ವರ್ಷಗಳಲ್ಲಿ ಗುರೂಜಿಯವರು ಬಹಳ ಕೆಲಸ ಮಾಡಿದ್ದಾರೆ. ಮಹರ್ಷಿ ಅಮರರವರಿಂದ ಪಡೆದ ಜ್ಞಾನವನ್ನು ಹರಡಿದ್ದು ಮಾತ್ರವಲ್ಲದೆ, ಬಹಳಷ್ಟು ಹೊಸ ಜ್ಞಾನವನ್ನೂ ಅವರು ಸೇರಿಸಿದ್ದಾರೆ. ವಾರ್ತಾಪತ್ರದಲ್ಲಿ 'ರಿಫ್ಲೆಕ್ಷನ್ಸ್' (ಅನಿಸಿಕೆಗಳು) ಅಂಕಣವನ್ನು ಸತತವಾಗಿ 25 ವರ್ಷಗಳಿಂದಲೂ ಬರೆಯುತ್ತಿದ್ದಾರೆ! ಇದೊಂದು ಅಪೂರ್ವ ಸಾಧನೆ.

ಜನವರಿ 2008ರಿಂದ ನವಂಬರ್ 2012ರ ವರೆಗೆ ಅವರು ಬರೆದ 'ರಿಫ್ಲೆಕ್ಷನ್ಸ್'ಅನ್ನು ಒಳಗೊಂಡಿರುವ 'ದಿ ಬುಕ್ ಆಫ್ ರಿಫ್ಲೆಕ್ಷನ್ಸ್'ನ 3ನೇ ಭಾಗವನ್ನು ಈ ದಿನ ಹೊರತರಲು ಸಂತೋಷವೆನಿಸುತ್ತದೆ. ಭಾನುವಾರದ ತರಗತಿಗಳಲ್ಲಿ ಸತತವಾಗಿ 25 ವರ್ಷಗಳು ಮಾತನಾಡಿದ್ದಾರೆ. ಅದರ ಮೂಲಕ ಸಾಗರದಷ್ಟು ಜ್ಞಾನವನ್ನು ಕೊಟ್ಟಿದ್ದಾರೆ. 'ಗುರೂಜಿ ಸ್ಪೀಕ್ಸ್' ಪುಸ್ತಕದ 6 ಭಾಗಗಳನ್ನು ಈಗಾಗಲೇ ಪ್ರಕಟಿಸಿದ್ದೇವೆ. ಇನ್ನೂ ಪ್ರಕಟಿಸಬೇಕಾಗಿರುವುದು ಬಹಳಷ್ಟಿದೆ. ಗುರೂಜಿಯವರು ಮಾತನಾಡಿದ ಎಲ್ಲವನ್ನೂ ಪ್ರಕಟಿಸಲು ಪ್ರಯತ್ನಿಸುತ್ತೇವೆ. ಅದು ನಮಗೆ ಅಪೂರ್ವ ಸಂಪತ್ತು. ಮಹರ್ಷಿ ಅಮರರವರಂತೆಯೇ ಗುರೂಜಿಯವರು ಬೃಹತ್ ಪ್ರಮಾಣದ ಆಧ್ಯಾತ್ಮಿಕ ಚೈತನ್ಯಗಳನ್ನು ಕೆಳತಂದಿದ್ದಾರೆ. ಈ ಚೈತನ್ಯಗಳು ನಮಗೆ ಮತ್ತು ಮುಂದಿನ ಜನಾಂಗಗಳಿಗೆ ಕೂಡ ಸಹಾಯ ಮಾಡುತ್ತವೆ. ಗುರೂಜಿಯವರೊಂದಿಗೆ ಅನೇಕ ಅನೌಪಚಾರಿಕ ಚರ್ಚೆಗಳು ನಡೆದಿವೆ, ಆಗ ಋಷಿಗಳ ಸಹಾಯದಿಂದ ಅಪಾರವಾದ ಜ್ಞಾನವನ್ನು ಗುರೂಜಿಯವರು ಕೆಳತಂದರು. ಈ ಜ್ಞಾನವನ್ನು "ಐ ಗುರೂಜಿ" ಪುಸ್ತಕದ 7 ಭಾಗಗಳಲ್ಲಿ ಸಂಗ್ರಹಿಸುವ ವಿಶೇಷ ಕೆಲಸವನ್ನು ಸೀಮ ಅವರು ಮಾಡಿದ್ದಾರೆ. ಗುರೂಜಿಯವರು ಸೂಕ್ಷ್ಮ ಮಟ್ಟದಲ್ಲಿ ಏನು ಮಾಡಿದರೆಂಬುದು ತಿಳಿದಿಲ್ಲ. ಈಗ ಅವಶ್ಯವಿರುವ ನಮ್ಮ ಜೀವನಗಳ ಮಾನವಭಾಗಕ್ಕೆ ಮತ್ತು ಪರಿವರ್ತನೆಗೆ ನಾವು ಹೆಚ್ಚು ಗಮನಕೊಡುವುದನ್ನು ಬಹುಶಃ ಅವರು ಬಯಸಿದ್ದಿರಬಹುದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ನಮ್ಮ ಮಾಸ್ಟರ್ ಗುರೂಜಿ

**ಶೋಭಾ ಕೆ. ರಾವ್; ಅನು: ಪಾಂಡುರಂಗ**

ಗುರೂಜಿಯವರಂಥ ಉತ್ಕೃಷ್ಟ ಮಾಸ್ಟರ್‌ಗಳು ಅಪರೂಪಕ್ಕೊಮ್ಮೆ ಈ ಭೂಮಿಗೆ ಬರುತ್ತಾರೆ. ಅವರು ಅತ್ಯಂತ ಸರಳವಾಗಿದ್ದು, ಸ್ನೇಹಮಯಿ ಮತ್ತು ವಿನಯವಂತರಾಗಿದ್ದುದರಿಂದ, ಅವರು ಒಬ್ಬ ಮಹರ್ಷಿಯಾಗಿದ್ದರೂ ಬಹಳ ಭಿನ್ನವಾಗಿದ್ದರು. ಗುರೂಜಿಯವರು ಜನರೊಂದಿಗೆ ಸಂಭಾಷಿಸುತ್ತಿದ್ದ ರೀತಿ, ಅವರ ಚಲನೆ – ಪ್ರತಿಯೊಂದರಲ್ಲೂ ಅವರ ಪ್ರೀತಿ, ನಮ್ರತೆ ಹೊರಹೊಮ್ಮುತ್ತಿತ್ತು. ತ್ಯಾಗಕ್ಕೆ, ಋಷಿಗಳಿಗಾಗಿ ಅರ್ಪಣಾ ಮನೋಭಾವ ಮತ್ತು ಪ್ರೀತಿಗೆ ಅವರ ಜೀವನವೇ ಒಂದು ಉದಾಹರಣೆ. ನಮ್ಮ ಆಧ್ಯಾತ್ಮಿಕ ಪಯಣದಲ್ಲಿ ಅವರನ್ನು ಗುರುಗಳಾಗಿ ಪಡೆದು, ಅವರಿಂದ ಮಾರ್ಗದರ್ಶಿಸಲ್ಪಡುತ್ತಿರುವ ನಾವು ನಿಜವಾಗಿಯೂ ಭಾಗ್ಯಶಾಲಿಗಳು.

ಗುರೂಜಿಯವರು ಋಷಿಗಳಿಗೆ ಸಂಪೂರ್ಣವಾಗಿ ಶರಣಾಗತರಾಗಿದ್ದರು. “ಋಷಿಗಳ ಅನುಮತಿ ಪಡೆಯದೇ, ನಾನು ಏನನ್ನೂ ಮಾಡುವುದಿಲ್ಲ” ಎಂದು ಅವರು ಹೇಳುತ್ತಿದ್ದರು. ಋಷಿಗಳಿಗಾಗಿ ಮತ್ತು ಅವರ ಕೆಲಸಗಳಿಗಾಗಿ ಅವರು ಬದುಕಿದರು. ಋಷಿಗಳ ಸೂಚನೆಯಂತೆ ತಪೋನಗರದಲ್ಲಿ ಬೃಹತ್ತಾದ ಮತ್ತು ಭವ್ಯವಾದ ಕಟ್ಟಡಗಳನ್ನು ಅವರು ನಿರ್ಮಾಣ ಮಾಡಿದರು. ಎಲ್ಲಾ ಕಟ್ಟಡಗಳು ಪ್ರತಿಯೊಂದು ಸೂಕ್ಷ್ಮ ವಿವರಣೆಯಲ್ಲೂ ಅತ್ಯಂತ ಪರಿಪೂರ್ಣವಾಗಿವೆ. ಮಹಾನ್ ಸಪ್ತಋಷಿಗಳ ಭವಿಷ್ಯತ್ತಿನ ಮುಖ್ಯಕೇಂದ್ರವನ್ನಾಗಿಸುವುದಕ್ಕಾಗಿ ಅವರು ತಪೋನಗರವನ್ನು ಪರಿಶುದ್ಧ ಮತ್ತು ಪವಿತ್ರಗೊಳಿಸಲು ಬೇರೆಬೇರೆ ಹಂತಗಳಲ್ಲಿ ಕೆಲಸ ಮಾಡಿದ್ದಾರೆ. ಗುರೂಜಿಯವರು ಕುಂಡಲಿನೀ ಚೈತನ್ಯ, ‘ರಾ’ ಚೈತನ್ಯ, ಹೀಲಿಂಗ್ ಚೈತನ್ಯ ಇತ್ಯಾದಿ ಅತ್ಯಂತ ವಿರಳ ಚೈತನ್ಯಗಳ ಭಂಡಾರವನ್ನೇ ಕೆಳತಂದಿದ್ದಾರೆ. ಅವುಗಳನ್ನು ತಪೋನಗರದಲ್ಲಿ ನಿಗದಿತ ಸ್ಥಳಗಳಲ್ಲಿ ಭೂಮಿಯ ಅಡಿಯಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಈಗಾಗಲೇ ತಪೋನಗರ ಈ ದೈವೀ ಚೈತನ್ಯಗಳಿಂದ ಕಂಪಿಸುತ್ತಿದೆ. ಸೂಕ್ಷ್ಮ ಸಂವೇದನೆ ಹೊಂದಿರುವ ಜನರು ಇಲ್ಲಿರುವ ಚೈತನ್ಯಗಳ ಅನುಭವ ಪಡೆಯುತ್ತಿದ್ದಾರೆ. ಹಾಗೇ ಈ ಚೈತನ್ಯಗಳನ್ನು ಪಡೆಯುವುದಕ್ಕೋಸ್ಕರ ಅವರು ಆಗಾಗ್ಗೆ ಇಲ್ಲಿಗೆ ಬರುತ್ತಿರುವುದಾಗಿ ನಮ್ಮೊಂದಿಗೆ ಹೇಳಿಕೊಂಡಿದ್ದಾರೆ!

ಪ್ರಸ್ತುತದ ಸಮಯ ತೀವ್ರ ಪರಿವರ್ತನಾ/ಪ್ರಳಯ ಕಾಲವಾಗಿದ್ದು, ತುಂಬಾ ಕಷ್ಟಕರವಾಗಿರುತ್ತದೆಂದು ಗುರೂಜಿಯವರು ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಹಾಗೂ ಈ ದಿನಗಳಲ್ಲಿ ‘ಸುಳ್ಳು ಪ್ರವಾದಿ’ಗಳಿಂದ ಅಥವಾ ತಿರುಚಲ್ಪಟ್ಟ ಜ್ಞಾನದಿಂದ ತಪ್ಪು ಮಾರ್ಗದರ್ಶನ ಪಡೆಯದಿರುವಂತೆ ಜಾಗರೂಕರಾಗಿರಬೇಕೆಂದು ಹೇಳಿದ್ದಾರೆ. ಸತ್ಯದ ಅನ್ವೇಷಣೆಗೆ ಅವಶ್ಯಕವಾಗಿರುವ ಎಲ್ಲಾ ಜ್ಞಾನ ಸಂಪತ್ತು, ಚೈತನ್ಯಗಳು, ಸಹಾಯ ಮತ್ತು ಮಾರ್ಗದರ್ಶನವನ್ನು ಗುರೂಜಿಯವರು ನಮಗೆ ಒದಗಿಸಿದ್ದಾರೆ. ಹೇಗೆ ಒಬ್ಬ ಕುರುಬ ಯಾವಾಗಲೂ ತನ್ನ ಕುರಿಮಂದೆಯ ಯೋಗಕ್ಷೇಮ ನೋಡಿಕೊಳ್ಳುತ್ತಾನೋ, ಹಾಗೆಯೇ ನಮ್ಮ ದೈವಸ್ವರೂಪಿ ಗುರೂಜಿಯವರು ತಮ್ಮೆಲ್ಲ ಶಿಷ್ಯವರ್ಗದ ಯೊಗಕ್ಷೇಮವನ್ನು ನೋಡಿಕೊಳ್ಳುತ್ತಾ, ಪ್ರತಿಯೊಬ್ಬರನ್ನೂ ತಮ್ಮ ಮೂಲ ಸ್ಥಾನವಾದ ಬೆಳಕಿನೆಡೆಗೆ ಮಾರ್ಗದರ್ಶಿಸಿ, ಮುನ್ನಡೆಸುತ್ತಿದ್ದಾರೆ. ■

## ಗುರೂಜಿ

**ವೈಶಾಲಿ ಜೋಷಿ; ಅನು: ಸುಧಾಕರ್**

ಬೆಳಕಿನೆಡೆಗಿನ ಮಾರ್ಗದಲ್ಲಿ ಹೆಜ್ಜೆಯಿಡಲು ನಮಗೆ ಸಹಾಯಮಾಡುವುದಕ್ಕಾಗಿ ದೇವರ ಕೃಪೆಯೇ ಗುರೂಜಿಯವರ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. ತಮ್ಮನ್ನೇ ಉದಾಹರಣೆಯಾಗಿಸಿಕೊಂಡು ಅವರು ನಮಗೆ ಕಲಿಸಿದರು. ತಮಗೆ ಸಿಕ್ಕಿದ ಮೊಟ್ಟ ಮೊದಲ ಅವಕಾಶದಲ್ಲಿಯೇ ಋಷಿಗಳ ಕೆಲಸಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ನಾವು ಸೋತಾಗ, ಅಸಹಾಯಕರಾಗಬಾರದು ಅಥವ ನಿರಾಶರಾಗಬಾರದು ಎನ್ನುವುದನ್ನು ತಮ್ಮ ಜೀವನದ ಹೋರಾಟದ ಮೂಲಕ ನಮಗೆ ತೋರಿಸಿಕೊಟ್ಟರು. ಋಷಿಗಳನ್ನು ಮತ್ತು ದೇವರನ್ನು ಅವರು ಕಣ್ಣು ಮುಚ್ಚಿ ನಂಬಿದರು. ಹತಾಶೆ ಮತ್ತು ನಿರಾಶೆಯ ಎಲ್ಲ ಸನ್ನಿವೇಶಗಳನ್ನು ಎದುರಿಸಲು ಅದು ಶಕ್ತಿ ನೀಡಿತು.

ಋಷಿಗಳಿಗೆ ತಮ್ಮನ್ನು ಸಮರ್ಪಿಸಿಕೊಂಡರು ಮತ್ತು ಪ್ರಪಂಚದ ಕತ್ತಲನ್ನು ಮತ್ತು ಅಜ್ಞಾನವನ್ನು ತೊಡೆದುಹಾಕುವುದಕ್ಕಾಗಿ ದೈವೀ ಬೆಳಕನ್ನು ಹೊರಸೂಸುವ ದಿವ್ಯವಾದ ಸೂರ್ಯನಾಗಿ ಹೊರಹೊಮ್ಮಿದರು. ನಮ್ಮನ್ನು ಆಧ್ಯಾತ್ಮಿಕವಾಗಿ ಮೇಲೆತ್ತಲು, ನಮಗೆ ಸ್ಫೂರ್ತಿ ನೀಡಲು ಹಾಗೂ ಪ್ರೇರಣೆ ನೀಡಲು ಅವರ ಉಪಸ್ಥಿತಿಯೇ ಸಾಕಾಗುತ್ತಿತ್ತು. ಅವರು ಪರಿಶುದ್ಧ ಜ್ಞಾನವನ್ನು ಮೇಲಿನ ಸ್ತರಗಳಿಂದ ಚಾನಲ್ ಮಾಡಿದರು. ಪ್ರಚಲಿತವಿರುವ ವಿಕೃತತೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿದರು. ವಿವಿಧ ದೈವೀ ಚೈತನ್ಯಗಳು ಅವರ ಮೂಲಕ ಹರಿಯುತ್ತಿದ್ದವು, ಅವುಗಳನ್ನು ತಪೋನಗರದಲ್ಲಿ ಸ್ಥಾಪಿಸಿ ಮಾನಸಿ ವಲಯದ ನಿರ್ಮಾಣ ಮಾಡಲಾಯಿತು. ಪ್ರೀತಿ, ವಿನಯವಂತಿಕೆ, ಸಮರ್ಪಣೆ, ಪ್ರಾಮಾಣಿಕತೆ ಹಾಗೂ ಬದ್ಧತೆಗಳಿಂದ ಅವರು ತಮ್ಮ ಜೀವನದ ಕೊನೆಯ ದಿನದವರೆಗೂ ಕೆಲಸವನ್ನು ನಿರ್ವಹಿಸಿದರು.

ಪ್ರೀತಿಯ ಮಹಾ ಸಾಗರವಾದ ಅವರಲ್ಲಿ ಅಪಾರವಾದ ಅನುಕಂಪ ತುಂಬಿತ್ತು. ನಮ್ಮ ನಂಬಿಕೆಗಳಿಗೆ ಅಡ್ಡಿಪಡಿಸದೆ ಹಾಗೂ ನಮ್ಮ ಪರಿಸರವನ್ನು ಲೆಕ್ಕಿಸದೆ, ನಾವು ಎಲ್ಲಿದ್ದೇವೆಯೋ ಅಲ್ಲಿಂದ ಮುಂದಕ್ಕೆ ಸಾಧನೆಯಲ್ಲಿ ಪ್ರಗತಿ ಸಾಧಿಸಲು ನಮಗೆ ಸಹಾಯ ಮಾಡಿದರು. ಮಾರ್ಗದಲ್ಲಿರುವ ಹಳ್ಳ ಗುಂಡಿಗಳು ಹಾಗೂ ಅಡಚಣೆಗಳ ಅರಿವನ್ನುಂಟುಮಾಡಿದರು ಮತ್ತು ಅವುಗಳನ್ನು ಜಯಿಸಲು ಮಾರ್ಗದರ್ಶಿಸಿದರು. ಅವರೊಡನೆ ನಮಗಿದ್ದ ಸಂಬಂಧ ಪ್ರತಿಯೊಬ್ಬರಿಗೂ ಅನನ್ಯವಾಗಿತ್ತು. ಅವರೊಂದಿಗಿನ ನಮ್ಮ ಸಹವಾಸವು ಒಂದು ಕವಚವಿದ್ದಂತೆ, ಪ್ರಪಂಚದಲ್ಲಿರುವ ಎಲ್ಲ ಪ್ರಲೋಭನೆಗಳು ಹಾಗೂ ಪ್ರತಿಕೂಲ ಶಕ್ತಿಗಳಿಂದ ನಮ್ಮನ್ನು ಕಾಯುತ್ತದೆ ಹಾಗೂ ರಕ್ಷಿಸುತ್ತದೆ.

ಈಗ ಅವರು ಬೇರೊಂದು ಸ್ತರದಲ್ಲಿದ್ದರೂ ನಮ್ಮ ಪ್ರಾಮಾಣಿಕ ಪ್ರಾರ್ಥನೆಯು ಅವರನ್ನು ತಲುಪುತ್ತದೆ, ನಮ್ಮ ಅವಶ್ಯಕತೆಗಳು ಮತ್ತು ಸಮಸ್ಯೆಗಳು ಅವರಿಗೆ ತಿಳಿಯುತ್ತದೆ. ಅವರ ಕೃಪೆ ಹಾಗೂ ರಕ್ಷಣೆಯನ್ನು ಪ್ರತಿಯೊಂದು ಹೆಜ್ಜೆಯಲ್ಲೂ ಕಾಣಬಹುದು. ಬೆಳಕು ನಮ್ಮ ಅಂತಿಮ ಗಮ್ಯ; ಗುರೂಜಿಯವರು ನಮ್ಮನ್ನು ಅಲ್ಲಿಗೆ ಕರೆದೊಯ್ಯುವ ಹಡಗಿನ ಕ್ಯಾಪ್ಟನ್. ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಇಲ್ಲಿ ನಮ್ಮ ಕೆಲಸವೇನು?**

ಉ: ನಾವು ಧ್ಯಾನವನ್ನು ಕಲಿಸುತ್ತೇವೆ ಮತ್ತು ಧ್ಯಾನದ ತಂತ್ರಗಳಲ್ಲಿ ಜನರಿಗೆ ತರಬೇತಿ ನೀಡುತ್ತೇವೆ. ಜನರಿಗೆ ಆಧ್ಯಾತ್ಮಿಕ ವಿಷಯಗಳಲ್ಲಿ ಮಾರ್ಗದರ್ಶನ ನೀಡುತ್ತೇವೆ. ಈ ಜಗತ್ತಿನಲ್ಲಿ ಸಮರ್ಪಕವಾಗಿ ಜೀವನ ನಡೆಸಲು ಮತ್ತು ಜನರು ತಮ್ಮ ಸುತ್ತ ಮುತ್ತ ನಡೆಯುತ್ತಿರುವ ವಿದ್ಯಾಮಾನಗಳ ನಡುವೆಯೂ ತಮ್ಮ ಭರವಸೆಯನ್ನು ಉಳಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತೇವೆ. ಮಾರ್ಗದರ್ಶನ ಮತ್ತು ರಕ್ಷಣೆ ಪ್ರತಿಯೊಬ್ಬರಿಗೂ ಸಿಗುತ್ತದೆ. ಋಷಿಗಳಿಂದ ಪಡೆದ ಜ್ಞಾನ ಮತ್ತು ಚೈತನ್ಯಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುತ್ತೇವೆ. ನಾವು ಪ್ರಮುಖವಾಗಿ, ಅನೇಕ ಪೀಳಿಗೆಗಳಿಂದ ನಮಗೆ ಹಸ್ತಾಂತರಿಸಲಾದ ಮೂಢನಂಬಿಕೆಗಳು ಮತ್ತು ತಿರುಚಲ್ಪಟ್ಟ ವಿಷಯಗಳ ಬಗ್ಗೆ ತಿಳಿ ಹೇಳುವುದಕ್ಕೆ ಪ್ರಯತ್ನಿಸುತ್ತೇವೆ. ಜನರು ಅಜ್ಞಾನದಿಂದ ಹೊರಬರಲು ಸಹಾಯ ಮಾಡುತ್ತೇವೆ. ನಮ್ಮನ್ನು ಮತ್ತು ಇತರರನ್ನು ಹೀಲ್ ಮಾಡುವುದನ್ನು ಕಲಿಸಿಕೊಡುತ್ತೇವೆ. ಆಧ್ಯಾತ್ಮಿಕ ವಾಸ್ತವತೆಗಳು, ಗೊತ್ತಿರುವ ಮತ್ತು ಅಜ್ಞಾತವಾಗಿ ಉಳಿದಿರುವ ವಿಷಯಗಳ ಬಗ್ಗೆ ಕೂಡಾ ನಾವು ಅಧ್ಯಯನ ಮಾಡುತ್ತೇವೆ. ನಾವು ಹೀಲಿಂಗ್ ಚೈತನ್ಯಗಳನ್ನು ಮತ್ತು ಇತರ ಅನೇಕ ಚೈತನ್ಯಗಳನ್ನು ಕೆಳತಂದು ಇಲ್ಲಿ ಸ್ಥಾಪಿಸುತ್ತೇವೆ. 'ರಾ' ಚೈತನ್ಯಗಳು ಮತ್ತು ಬೇರೆ ಲೋಕಗಳ ಚೈತನ್ಯಗಳನ್ನು ಕೂಡಾ ಕೆಳತಂದು ಸ್ಥಾಪಿಸಿದ್ದೇವೆ. ಯಾವುದೇ ಧರ್ಮದ ಸ್ಥಾನವನ್ನು ತುಂಬಬಲ್ಲ ಒಂದು ಮೌಲ್ಯಾಧಾರಿತ ವ್ಯವಸ್ಥೆಯುಳ್ಳ ವಿಶ್ವೈಕ್ಯವಾದವನ್ನು ಸ್ಥಾಪಿಸಲು ಯತ್ನಿಸುತ್ತಿದ್ದೇವೆ. ನಾವು ಮಾಡುವ ಲೈಟ್ ಚಾನಲಿಂಗ್ ನಿಸ್ವಾರ್ಥದ ಮತ್ತು ನಮಗೆ ಸ್ವಪ್ರತಿಫಲವನ್ನು ನೀಡುವ ಒಂದು ಕೆಲಸವಾಗಿದೆ. ಸೂಕ್ಷ್ಮ ಮಟ್ಟದಲ್ಲಿ ಸಹ ಬಹಳಷ್ಟು ಕೆಲಸಗಳನ್ನು ಮಾಡುತ್ತಿದ್ದೇವೆ.

**ಪ್ರ: ಅಜ್ಞಾನ ಅಂದರೇನು?**

ಉ: ಅಜ್ಞಾನವೆಂದರೆ ಮುಖ್ಯವಾಗಿ ನಮ್ಮ ಬಗ್ಗೆ ನಮಗಿರುವ ಅಜ್ಞಾನ; ನಾವು ಯಾರು ಎಂಬುದು ನಮಗೆ ಗೊತ್ತಿಲ್ಲ. ನಾವು ಆತ್ಮಗಳು; ದೇಹ, ಮನಸ್ಸು ಅಥವಾ ಬುದ್ಧಿಯಲ್ಲ. ನಾವು ಯಾರೆಂದು ಅಂದುಕೊಂಡಿದ್ದೇವೆಯೋ ಅದು ನಾವಲ್ಲ. ನಾವು ಬೆಳಕಿನ ಕಣಗಳು. ಬಹಳ ಜನರಿಗೆ ಇದರ ಬಗ್ಗೆ ಅರಿವಿಲ್ಲ.

**ಪ್ರ: ಅಂತರ್ಮುಖಿ ಆಗುವುದು ಎಂದರೇನು?**

ಉ: ಪ್ರತ್ಯಾಹಾರವೆಂದರೆ, ನಮ್ಮ ಆಂತರ್ಯದೆಡೆಗೆ ತಿರುಗುವುದು ಅಥವಾ ನಮ್ಮ ಅಂತರಾಳಕ್ಕೆ ಇಳಿಯುವುದು. ಇದರ ಮೊದಲ ಹಂತವಾಗಿ ನಾವು ಧ್ಯಾನ ಮಾಡಲು ಪ್ರಾರಂಭಿಸುತ್ತೇವೆ, ಮೌನಗೊಳ್ಳುತ್ತೇವೆ ನಂತರ ನಿಶ್ಚಲತೆಯ ಮಹಾಸಾಗರವನ್ನು ಪ್ರವೇಶಿಸುತ್ತೇವೆ. ಆಗ ನಮ್ಮ ಅರಿವು ಮೇಲೇರಿ, ವಿಸ್ತಾರಗೊಂಡು ಬೆಳಕಿನ ಅನುಭವ ಪಡೆಯುತ್ತದೆ ಹಾಗೂ ಸಮಾಧಿಯ ಮತ್ತು ದೈವಸಾಕ್ಷಾತ್ಕಾರದ ಅನುಭವ ಪಡೆಯುತ್ತದೆ. ಅಂತರ್ಮುಖಿ ಆಗುವುದೆಂದರೆ ಹೊರಗಿನ ಪ್ರಪಂಚದ ಆಕರ್ಷಣೆಗಳಿಂದ ನಮ್ಮ ಇಂದ್ರಿಯಗಳನ್ನು ಹಿಡಿದಿಡುವುದಷ್ಟೇ ಅಲ್ಲ. ಅಂತರ್ಮುಖಿಯಾಗುವುದರ ಅರ್ಥ ಮುಕ್ತಿಯನ್ನು ಪಡೆಯುವುದು, ನಮ್ಮ ಮೂಲಕ್ಕೆ ಹಿಂದಿರುಗುವುದು.

**ಪ್ರ: ದ್ವಿಜ ಅಂದರೆ ಯಾರು?**

ಉ: ಇದು ಒಂದು ಸಂಸ್ಕೃತ ಪದ. ಅಕ್ಷರಶಃ ಹೇಳುವುದಾದರೆ ಎರಡು ಜನ್ಮ ಪಡೆಯುವುದು. ಮೊದಲ ಬಾರಿ ನಾವು ಭೌತಿಕವಾಗಿ ಹುಟ್ಟಿದಾಗ ಜನ್ಮ ಪಡೆಯುತ್ತೇವೆ ಮತ್ತು ನಾವು ಆಧ್ಯಾತ್ಮಿಕ ಜೀವನದ ದೀಕ್ಷೆ ಪಡೆದಾಗ ಅದು ಎರಡನೆಯ ಜನ್ಮವೆನಿಸಿಕೊಳ್ಳುತ್ತದೆ. ಇದು ಯಾವ ಜಾತಿಗೂ ಸಂಬಂಧಪಟ್ಟಿದ್ದಲ್ಲ.

**ಪ್ರ: ಆಧ್ಯಾತ್ಮಿಕ ವಿಜ್ಞಾನ ಎಂದರೇನು?**

ಉ: ಇದು ಆತ್ಮದ ವಿಜ್ಞಾನ. ಇದು ಆತ್ಮಕ್ಕೆ ಸಂಬಂಧಪಟ್ಟ ಸಮಸ್ತ ಜ್ಞಾನ ಸಂಪತ್ತು. ಆಧ್ಯಾತ್ಮಿಕ ವಿಜ್ಞಾನವೆಂದರೆ ಅದು ಆತ್ಮದ ಮೂಲದ ಬಗ್ಗೆ, ಆತ್ಮದ ಪಯಣದ ಬಗ್ಗೆ, ಹುಟ್ಟು ಸಾವುಗಳ ಬಗ್ಗೆ, ಸೃಷ್ಟಿಯ ಬಗ್ಗೆ, ಹಿಂದಿನ ಜನ್ಮಗಳ ಬಗ್ಗೆ, ವಾಕ್ ಇನ್‌ಗಳ ಬಗ್ಗೆ, ಸೂಕ್ಷ್ಮ ಪ್ರಯಾಣ, ಅಂತರ್‌ಗ್ರಹಣ ಶಕ್ತಿ ಇತ್ಯಾದಿ ಎಲ್ಲದರ ಬಗ್ಗೆಯೂ ಆಗಿದೆ. ಆಧ್ಯಾತ್ಮಿಕ ವಿಜ್ಞಾನವು ಅತಿ ಪ್ರಾಚೀನವಾದುದು ಮತ್ತು ಋಷಿಗಳಿಂದ ಬಂದುದಾಗಿದೆ ಹಾಗೂ ಇತ್ತೀಚಿಗೆ ಬೆಳಕಿನ ಕಾರ್ಯಕರ್ತರು ಮತ್ತು ಹೊಸ ಯುಗದವರು ಬಹಳಷ್ಟು ವಿಷಯಗಳನ್ನು ಇದರಲ್ಲಿ ಸೇರಿಸಿದ್ದಾರೆ.

**ಪ್ರ: ಋಷಿಗಳಿಂದ ಬರುವ ಉತ್ತರಗಳನ್ನು ನಮಗೆ ಓದುವುದಕ್ಕೆ ಏಕೆ ಕಷ್ಟವಾಗುತ್ತದೆ?**

ಉ: ಪ್ರಮುಖವಾದ ಕಾರಣವೆಂದರೆ ನಾವು ತೆರೆದ ಮನಸ್ಸಿನಿಂದ ಕುಳಿತುಕೊಳ್ಳುವುದಿಲ್ಲ. ನಾವು ನಮ್ಮದೇ ಆದ ಅಭಿಪ್ರಾಯಗಳನ್ನು, ನಿರ್ಣಯಗಳು ಮತ್ತು ಉತ್ತರಗಳನ್ನು ಹೊಂದಿರುತ್ತೇವೆ. ಹಾಗೂ ನಮ್ಮ ನಕಾರಾತ್ಮಕ ಆಲೋಚನೆಗಳು ಮತ್ತು ಭಾವನೆಗಳು ಸಂವಹನ ವಾಹಕಗಳಿಗೆ ತಡೆಯುಂಟುಮಾಡುತ್ತವೆ. ಇದಕ್ಕೆ ದೀರ್ಘ ಕಾಲದ ಅಭ್ಯಾಸ ಮತ್ತು ಅಪಾರವಾದ ಸಹನೆ ಬೇಕು.


**ಪ್ರ: ಋಷಿಗಳನ್ನು ಸಂಪರ್ಕಿಸುವುದಕ್ಕೆ ನಿಗದಿತ ಸಮಯ ಇದೆಯೇ?**

ಉ: ಸಂಪರ್ಕಕ್ಕೆ ಯಾವುದೇ ನಿಗದಿತ ಸಮಯ ಇಲ್ಲ. 'ನಿಶೀತ ಕಾಲ'ದಲ್ಲಿ ಅಂದರೆ ಬೆಳಗಿನ ಜಾವ ಸುಮಾರು 1 ಗಂಟೆಯಿಂದ 4 ಗಂಟೆಯವರೆಗೆ ಋಷಿಗಳನ್ನು ಸಂಪರ್ಕಿಸಬೇಡಿ ಎಂದು ಸಲಹೆ ನೀಡಿದ್ದೇವೆ. ನನ್ನ ಸಲಹೆಯ ಪ್ರಕಾರ ರಾತ್ರಿ 10 ರಿಂದ 11 ಗಂಟೆಯೊಳಗೆ ನಾವು ಋಷಿಗಳನ್ನು ಸಂಪರ್ಕಿಸೋಣ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನ ದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನಾನು ಧ್ಯಾನ ಮಾಡುವಾಗ ಮತ್ತು ಬೆಳಕಿನ ಸಂಚಲನ ಮಾಡುವಾಗ ನೀರವತೆ ಹಾಗೂ ವಿಸ್ತರಣೆಯ ಅನುಭವ ನನಗಾಗುತ್ತದೆ. ಈ ಅನುಭವ ಬೆಳಕಿನ ಸಂಚಲನ ಮಾಡುವಾಗ ಆಳವಾಗಿರುತ್ತದೆ. ನಾನು ಮಾಡುವ ಎಲ್ಲಾ ಕಾರ್ಯಗಳಲ್ಲೂ ಒಂದು ರೀತಿಯ ಪ್ರಶಾಂತತೆಯ ಭಾವನೆ ಇರುತ್ತದೆ. ಈ ಹಿಂದೆ ಒಪ್ಪಿಕೊಳ್ಳಲು ಬಹಳ ಕಷ್ಟವೆಂದೆನಿಸುತ್ತಿದ್ದ ಎಲ್ಲಾ ಜನರನ್ನು ಹಾಗೂ ಸಂದರ್ಭಗಳನ್ನು ಸುಲಭವಾಗಿ ಒಪ್ಪಿಕೊಳ್ಳಲು ಸಾಧ್ಯವಾಗಿದೆ.

– ಅಮಿತಾ ಪ್ರದೀಪ್

ಈಗ, ಯಾವಾಗಲೂ ನಮಗೆ ಮಾರ್ಗದರ್ಶಿಸಲು ಗುರೂಜಿಯವರು ಇರುತ್ತಾರೆ ಎಂಬ ತಿಳುವಳಿಕೆಯಿಂದಾಗಿ ಅಂಜಿಕೆ, ಒತ್ತಡ ಹಾಗೂ ಚಿಂತೆಗಳು ನನಗಿಲ್ಲ. ಈ ರೀತಿಯ ಆನಂದದ ಮಾನಸಿಕ ಸ್ಥಿತಿಯಲ್ಲಿ ಹಿಂದೆಂದೂ ನಾನಿರಲಿಲ್ಲ – ಸಂತೋಷವು ಒಂದು ಒಳಗಿನ ಅನುಭವವೆಂದು ಏಕೆ ಹೇಳುವರೆಂದು ಈಗ ನನಗೆ ಅರ್ಥವಾಗಿದೆ. ಜೀವನ ಅತಿ ಸುಂದರವೆನಿಸುತ್ತಿದೆ ಹಾಗೂ ಒಂದೊಂದು ಕ್ಷಣವನ್ನೂ ನಾನು ಆನಂದಿಸುತ್ತಿದ್ದೇನೆ. ನನಗಾದ ಅನುಭವಗಳಲ್ಲೆಲ್ಲಾ ಅತ್ಯಂತ ಸುಂದರವಾದ ಬಿಳಿಯ ಬೆಳಕಿನ ಧ್ಯಾನ ಮಾಡುತ್ತಾ ಪ್ರತಿಯೊಬ್ಬರೂ ಈ ಆನಂದವನ್ನು ಅನುಭವಿಸಬೇಕೆಂಬುದೇ ನನ್ನಾಸೆ.

– ಪಾಯಲ್ ವರ್ಮಾ

ಇದು ನನ್ನ ಜೀವನದ ಅತ್ಯಂತ ಉತ್ತಮವಾದ ಕಾಲ. ನನ್ನ ಅತ್ಯಂತ ಹತ್ತಿರದ ಸಂಬಂಧಿಗಳಿಬ್ಬರ ನಡುವೆ ಇಪ್ಪತ್ತು ವರ್ಷಗಳಿಂದಿದ್ದ ಬಿರುಕು ಯಾವುದೇ ಪ್ರಯಾಸವಿಲ್ಲದೆ ಸರಿಹೋಯಿತು; ಮತ್ತು ಈಗ ಹಿಂದೆ ಏನೂ ನಡೆದೇ ಇರಲಿಲ್ಲವೆಂಬಷ್ಟು ಹೊಂದಾಣಿಕೆಯಿಂದಿದ್ದಾರೆ. ಇದು ಕೇವಲ ಋಷಿಗಳಿಂದ ಮಾತ್ರ ಸಾಧ್ಯವಾಯಿತೆಂಬುದು ನನಗೆ ಮನವರಿಕೆಯಾಗಿದೆ.

ಋಷಿಗಳು ನನಗೆ ಸಾಕಷ್ಟು ಶಾಂತಿಯನ್ನು ಕೊಟ್ಟಿದ್ದಕ್ಕೆ ನನ್ನ ಜೀವನದ ಈ ಹಂತದಲ್ಲಿ ಅವರಿಗೆ ನಾನು ಆಭಾರಿಯಾಗಿರುವುದರೊಂದಿಗೆ, ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುವುದಲ್ಲದೆ ಬೇರೇನೂ ಹೇಳಲು ಸಾಧ್ಯವಿಲ್ಲ. ಇದು, ಬೆಳಕು, ಋಷಿಗಳು, ಅಮರಾಜಿ ಹಾಗೂ ಗುರೂಜಿಯವರಿಗೆ ಸಂಪೂರ್ಣ ಶರಣಾದುದರಿಂದ ನನಗೆ ಸಿಕ್ಕ ಒಂದು ಬಹುಮಾನ. ಮಾನಸ ಕುಟುಂಬದವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

– ನಂದಿತಾ ಪಟೇಲ್

ಧ್ಯಾನವು ನನ್ನ ಹೃದಯವನ್ನು ಸಂತೋಷ ಹಾಗೂ ತೃಪ್ತಿಯಿಂದ ತುಂಬಿ, ಪ್ರತಿದಿನವನ್ನೂ ಹೆಚ್ಚು ಸೂಕ್ತವಾಗಿ ಕಳೆಯಲು ಸಹಾಯಮಾಡಿದೆ. ಧ್ಯಾನದ ಇತರ ಪರಿಣಾಮಗಳನ್ನು ಸೂಕ್ತವಾಗಿ ಅರಿಯಲು ಸಾಧ್ಯವಾಗಿರುವುದು ನನ್ನ ಅದೃಷ್ಟ. ಧ್ಯಾನವು ಜೀವನವನ್ನು ಸಂಪೂರ್ಣವಾಗಿ ಜೀವಿಸಲು ನನಗೆ ಸಹಾಯ ಮಾಡುತ್ತಿದೆ ಎಂದು ನನಗನಿಸುತ್ತದೆ. ನನಗೆ ಈಗ ಹಿಂದಿಗಿಂತ ಉತ್ತಮವಾಗಿ, ಜೀವನದಲ್ಲಿ ನಾನು ಏನನ್ನು ಮಾಡಬೇಕು ಹಾಗೂ ಏನು ಮಾಡಬಯಸುತ್ತೇನೆ ಎಂಬುದರ ಅರಿವಾಗಿದೆ; ಇದು ನನ್ನ ಜೀವನವನ್ನು ಉತ್ತಮವಾಗಿ ನಿರ್ವಹಿಸಲು ಸಹಕರಿಸುತ್ತದೆ. ನಾನು ನಿಮ್ಮ ಮಾರ್ಗದರ್ಶನ ಹಾಗೂ ಬೆಂಬಲಕ್ಕೆ ಚಿರಋಣಿಯಾಗಿದ್ದೇನೆ.

– ಲಿನ್ ಕರತಾನಿ

ಫೆಬ್ರವರಿ 1 ರ ಅಮರ ಜಯಂತಿಯಂದು ನನಗೆ ತಪೋನಗರಕ್ಕೆ ಬರಲಾಗಲಿಲ್ಲ. ಆದ್ದರಿಂದ ನಾನು ಮನೆಯಲ್ಲೇ ವೆಬ್ ಕಾಸ್ಟ್‌ನ ನೇರಪ್ರಸಾರವನ್ನು ನೋಡಿ ಧ್ಯಾನ ಮಾಡಿದೆ. ಧ್ಯಾನ ಮಾಡುವಾಗ ನನಗೆ ಮಾನಸದ ಅಮರ ಸಮಾಧಿಯಲ್ಲಿ ಯಾವಾಗಲೂ ಬರುವ ಹೂವಿನ ಪರಿಮಳವು ಬಂತು! ಅಮರರವರು ನನ್ನ ಮನೆಗೇ ಬಂದು ಆಶೀರ್ವದಿಸಿದರೆಂದೆನಿಸಿತು. ಇದು ಒಂದು ಅದ್ಭುತವಾದ ಅನುಭವ!

– ವಿದ್ಯಾ ರವೀಂದ್ರನ್

ಧ್ಯಾನ ಮಾಡಲು ಪ್ರಾರಂಭಿಸಿದಾಗಿನಿಂದ, ಮುಂದಿನ ಎರಡು ಗಂಟೆಗಳಲ್ಲಿ ಏನು ನಡೆಯಬಹುದೆಂಬುದು ನನಗೆ ತಿಳಿಯಲು ಸಾಧ್ಯವಾಗಿದೆ. ಅದು ಘಟನೆಯ ರೂಪದಲ್ಲಿರದೆ ಸಂಕೇತಗಳ ರೂಪದಲ್ಲಿರುತ್ತದೆ. ಅವೆಲ್ಲವೂ ಒಳ್ಳೆಯ ಘಟನೆಗಳ ಸಂಕೇತಗಳಾಗಿರದೆ, ನನ್ನ ವಾಹನದ ಚಕ್ರಕ್ಕಾಗುವ ತೊಂದರೆ ಮತ್ತು ಕೆಲಸ ಆರಂಭಿಸುವ ಮುನ್ನವೇ ನನ್ನ ಹಿರಿಯ ಅಧಿಕಾರಿಗಳಿಂದ ಬೈಗಳು ಪಡೆಯುವಂತಹ ವಿಘ್ನಗಳ ಸಂಕೇತವಾಗಿರುತ್ತವೆ!

– ಚೇತನ್ ಸಿ.

ಒಂದು ದಿನ ನಾನು ಧ್ಯಾನಮಾಡುತ್ತಿದ್ದಾಗ, ಬಿಳಿಯ ವಸ್ತ್ರ ಧರಿಸಿದ್ದ ಋಷಿಗಳ ಪಾದಗಳನ್ನು ಹಿಡಿದು, ನನ್ನನ್ನು ಆಧ್ಯಾತ್ಮಿಕವಾಗಿ ಮುನ್ನಡೆಸಬೇಕೆಂದು ಬೇಡಿಕೊಳ್ಳುತ್ತಿದ್ದ ಅನುಭವವಾಯಿತು. ಆದರೆ ಅವರು ಏನೂ ಹೇಳದೆ ಮುಗುಳ್ನಗೆಯನ್ನು ಮಾತ್ರ ಬೀರಿದರು.

– ಸ್ವಾಮಿನಾಥನ್ ಸಿ.

ನನ್ನಲ್ಲಿ ಹಿಂದೆಂದೂ ಆಗಿರದಂತಹ ಸಕಾರಾತ್ಮಕ ಬದಲಾವಣೆಯು ಭೌತಿಕವಾಗಿ, ಮಾನಸಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಆಗುತ್ತಿದೆ. ನನ್ನ ಸಂಪೂರ್ಣ ಮನೋಭಾವ ಬದಲಾಗಿದೆ. ಹಾಗಾಗಿ ನಾನು ಜೀವನವನ್ನು ನೋಡುವ ರೀತಿಯೇ ಬದಲಾಗಿದೆ. ನಾನು ಈಗಾಗಲೇ ಸತ್ಯಯುಗದಲ್ಲಿರುವಂತೆ ನನಗೆ ಭಾಸವಾಗುತ್ತಿದೆ!

– ದುಶಾಲ್ ಗಜ್ಜರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ